# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಮೇ ೪ನೇ ವಾರ**

25-05-2026 TO 30-05-2026

## 'ಸೂರ್ಯಕಿರಣ' ಏರೋಬ್ಯಾಟಿಕ್ ಗೆ 30ರ ಸಂಭ್ರಮ

- ಸಕ್ಕರೆ ರಫ್ತುಗೆ ಅನುಮತಿ
- ಕೌರ್‌ಗೆ ಪದ್ಮಗೌರವ
- ಜನಸಂಖ್ಯೆ ಸ್ವರೂಪ ಅಧ್ಯಯನಕ್ಕೆ ಸಮಿತಿ
- SIRಗೆ ಸುಪ್ರೀಂ ಕೋರ್ಟ್ ಬಲ

## ಜಗತ್ತಿನ 800ಕ್ಕೂ ಹೆಚ್ಚು ಕಡೆ ವೈಮಾನಿಕ ಪ್ರದರ್ಶನ ನೀಡಿದ ಹೆಗ್ಗಳಿಕೆ

# ‘ಸೂರ್ಯಕಿರಣ’ ಏರೋಬ್ಯಾಟಿಕ್‌ಗೆ 30ರ ಸಂಭ್ರಮ

● ಶಶಿಕಾಂತ ಎಸ್. ಶೆಂಬೆಳ್ಳಿ

**ಬೀದರ್:** ವಾಯುಪಡೆಯ ಪ್ರತಿಷ್ಠಿತ ‘ಸೂರ್ಯಕಿರಣ’ ಏರೋಬ್ಯಾಟಿಕ್ ತಂಡ (ಎಸ್‌ಕೆಎಟಿ) ಈಗ 30ರ ಸಂಭ್ರಮದಲ್ಲಿದೆ. ಮೂರು ದಶಕಗಳಲ್ಲಿ ಈ ತಂಡದ ಕಾರ್ಯ ಹಾಗೂ ಸಾಧನೆ ಅನನ್ಯವಾಗಿದ್ದು, ವಾಯುಪಡೆಯ ‘ರಾಯಭಾರಿ’ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಒಂಬತ್ತು ಸೂರ್ಯಕಿರಣ ವಿಮಾನಗಳ ಏರೋಬ್ಯಾಟಿಕ್ ತಂಡವು ಮೈನವಿರೇಳಿಸುವ ವೈಮಾನಿಕ ಪ್ರದರ್ಶನಕ್ಕೆ ಹೆಸರಾಗಿದೆ. ಕಣಿವೆ, ಸಮುದ್ರ ತೀರ ಸೇರಿದಂತೆ ಹಲವು ಪ್ರಮುಖ ಸ್ಥಳಗಳಲ್ಲಿ ತನ್ನ ವೃತ್ತಿಪರತೆ ಪ್ರದರ್ಶಿಸಿದ ಖ್ಯಾತಿ ಇದಕ್ಕಿದೆ.

ಭಾರತದ ಪ್ರಮುಖ ನಗರಗಳು ಸೇರಿದಂತೆ ಚೀನಾ, ಶ್ರೀಲಂಕಾ, ಮ್ಯಾನ್ಮಾರ್, ಥಾಯ್ಲೆಂಡ್, ಸಿಂಗಪುರ, ಯುನೈಟೆಡ್ ಅರಬ್ ಎಮಿರೇಟ್ಸ್ ಸೇರಿದಂತೆ ಹಲವೆಡೆ ಸಾವಿರಾರು ಕಿ.ಮೀ ಕ್ರಮಿಸಿ, ಅತ್ಯುತ್ತಮ ಪ್ರದರ್ಶನ ನೀಡಿದೆ.

**ಮುಖ್ಯಾಂಶಗಳು**

- 1996ರಲ್ಲಿ ಬೀದರ್ ವಾಯುಪಡೆ ತರಬೇತಿ ಕೇಂದ್ರದಲ್ಲಿ ಸ್ಥಾಪನೆ
- ಪೈಲಟ್‌ಗಳಿಗೆ ಅತ್ಯಂತ ಸಂಕೀರ್ಣ ತರಬೇತಿ

‘ಏರೋಬ್ಯಾಟಿಕ್’ ತಂಡ 1996ರ ಮೇ 27ರಂದು ಬೀದರ್ ವಾಯುಪಡೆ ತರಬೇತಿ ಕೇಂದ್ರದಲ್ಲಿ ಸ್ಥಾಪನೆಗೊಂಡಿತ್ತು. 1996ರ ಸೆಪ್ಟೆಂಬರ್‌ನಲ್ಲಿ ಕಿರಣ ಎಂ.ಕೆ.–2 ಹೆಸರಿನ ವಿಮಾನಗಳ ಮೊಟ್ಟ ಮೊದಲ ಸಾರ್ವಜನಿಕ ವೈಮಾನಿಕ ಪ್ರದರ್ಶನ ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದಿತ್ತು. ಇದಾದ ಬಳಿಕ ಹಲವೆಡೆ ಈ ಲೋಹದ ಹಕ್ಕಿಗಳು ಕರಾಮತ್ತು ತೋರಿದ್ದವು.



ಸೂರ್ಯಕಿರಣ ಏರೋಬ್ಯಾಟಿಕ್ ತಂಡದ ವೈಮಾನಿಕ ಪ್ರದರ್ಶನದ ಸಂಗ್ರಹ ಚಿತ್ರ

2015ರಲ್ಲಿ ಕಿರಣ ಎಂ.ಕೆ.–2 ವಿಮಾನಗಳ ಜಾಗವನ್ನು ಕೆಂಪು–ಬಣ್ಣಗಳ ‘ಹಾಕ್ ಎಂ.ಕೆ.–132 ಜೆಟ್ ವಿಮಾನಗಳು ತುಂಬಿದವು. ತಂಡ ಈವರೆಗೆ 800ಕ್ಕೂ ಹೆಚ್ಚು ವೈಮಾನಿಕ ಪ್ರದರ್ಶನಗಳನ್ನು ನೀಡಿದೆ. ಈ ವಿಮಾನಗಳ ತರಬೇತಿ ಬೀದರ್ ಆಕಾಶದಲ್ಲಿ ನಿತ್ಯ ಸಾಮಾನ್ಯ.

**ಸಂಕೀರ್ಣ ತರಬೇತಿ:** ಈ ತಂಡದ ಪೈಲಟ್‌ಗಳಿಗೆ ಅತ್ಯಂತ ಸಂಕೀರ್ಣ ತರಬೇತಿಗೆ ಒಳಪಡಿಸಲಾಗುತ್ತದೆ. ಜಗತ್ತಿನ ಅತ್ಯುತ್ತಮ ಪೈಲಟ್‌ಗಳನ್ನು ಕೊಟ್ಟಿರುವ ಈ ತಂಡವು ಈಗ 30ರ ಸಂಭ್ರಮಕ್ಕೆ ಸಿದ್ಧಗೊಂಡಿದೆ.

Publication Date
25/05/2026

Presented by ಪ್ರಜಾವಾಣಿ

## ಹಂಪಿ: ಆಳ್ವಾರ್‌ರ ಮತ್ತೆರಡು ಭಗ್ನ ವಿಗ್ರಹಗಳು, 23 ಮೀಟರ್ ಉದ್ದದ ಚರಂಡಿ ಗೋಚರ

# ಹಜಾರರಾಮ ದೇಗುಲದಲ್ಲಿ ವ್ಯಾಳ ಶಿಲ್ಪ ಪತ್ತೆ

ಪ್ರಜಾವಾಣಿ ವಾರ್ತೆ

**ಹೊಸಪೇಟೆ (ವಿಜಯನಗರ):** ಅತ್ಯಂತ ಶಕ್ತಿಶಾಲಿ ಮತ್ತು ರೋಚಕ ಕಾಲ್ಪನಿಕ ಪ್ರಾಣಿ ‘ಯಾಳಿ’ ಎಂದೂ ಕರೆಯಲಾಗುವ ಎರಡು ಅಡಿ ಎತ್ತರದ ವ್ಯಾಳದ ಕಲ್ಲಿನ ಕೆತ್ತನೆಯು ಹಂಪಿಯ ಹಜಾರರಾಮ ದೇವಸ್ಥಾನದ ಆವರಣದಲ್ಲಿ ಪತ್ತೆಯಾಗಿದೆ.

ಜತೆಗೆ ಆಳ್ವಾರ್‌ರ ಮತ್ತೆರಡು ಭಗ್ನ ವಿಗ್ರಹಗಳು, 23 ಮೀಟರ್ ಉದ್ದದ ಚರಂಡಿ ಪತ್ತೆಯಾಗಿದೆ. ಚಪ್ಪಡಿಕಲ್ಲು ಹಾಸುವ ಕಾಮಗಾರಿಗಾಗಿ ಮಣ್ಣನ್ನು ಅಗೆಯುತ್ತಿದ್ದಾಗ ಇವು ಪತ್ತೆಯಾಗಿವೆ.

‘ಹಜಾರರಾಮ ದೇವಸ್ಥಾನದ ಭಿತ್ತಿಚಿತ್ರಗಳ ರೂಪದಲ್ಲಿ ಮಾತ್ರ ವ್ಯಾಳಗಳು ಇರುವುದಲ್ಲ, ಇಲ್ಲಿ ವ್ಯಾಳದ ಕೆತ್ತನೆ ನಡೆದು ಮಹಾದ್ವಾರದಲ್ಲಿ ಇಡಲಾಗಿತ್ತು ಎಂಬುದಕ್ಕೆ ಇದು ಸಾಕ್ಷಿ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ ತಿಳಿಸಿದರು.



ಹಂಪಿಯ ಹಜಾರರಾಮ ದೇವಸ್ಥಾನದ ಆವರಣದಲ್ಲಿ ಭಾನುವಾರ ನಡೆದ ಉತ್ಖನನ ವೇಳೆ ದೊರೆತ ವ್ಯಾಳ ಶಿಲ್ಪ —ಪ್ರಜಾವಾಣಿ ಚಿತ್ರ

‘ಆಳ್ವಾರ್‌ರ ಭಗ್ನಗೊಂಡ ಎರಡು ವಿಗ್ರಹಗಳು ನಾಲ್ಕು ದಿನಗಳ ಹಿಂದೆ ಪತ್ತೆಯಾಗಿದ್ದವು. ಇದೀಗ ಮತ್ತೆರಡು ವಿಗ್ರಹಗಳು ಪತ್ತೆಯಾಗಿವೆ. ಜತೆಗೆ 23 ಮೀಟರ್ ಉದ್ದದ ಕಲ್ಲಿನ ಚರಂಡಿ ಕಾಣಿಸಿದೆ. ವಿಜಯನಗರ ಕಾಲದಲ್ಲಿ ನೀರು ಹರಿದುಹೋಗಲು ಎಂತಹ ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂಬುದಕ್ಕೆ ಸಾಕ್ಷಿಯಾಗುತ್ತಿದೆ’ ಎಂದು ತಿಳಿಸಿದರು.

**ಕಿರುಗಾಲುವೆ?:** ‘ಇದು ಚರಂಡಿ ಆಗಿರುವ ಸಾಧ್ಯತೆ ಇಲ್ಲ, ಬದಲಿಗೆ ರಾಣಿ ಸ್ನಾನಗೃಹದಿಂದ ಮಹಾನವಮಿ ದಿಬ್ಬದ ಮೂಲಕ ಬರುತ್ತಿದ್ದ ನೀರಿನ ಹರಿವಿಗೆ ನಿರ್ಮಿಸಲಾಗಿದ್ದ ಕಿರುಗಾಲುವೆ ಇರಬಹುದು’ ಎಂದು ಪ್ರವಾಸಿ ಮಾರ್ಗದರ್ಶಿ ವಿರೂಪಾಕ್ಷಿ ವಿ.ಹಂಪಿ ಅಭಿಪ್ರಾಯಪಟ್ಟಿದ್ದಾರೆ.



ಉತ್ಖನನ ವೇಳೆ ಕಾಣಿಸಿದ ಪುರಾತನ ಚರಂಡಿ

**ಏನಿದು ‘ವ್ಯಾಳ’?**

ಸಿಂಹ, ಆನೆ ಮತ್ತು ಕುದುರೆಯಂತಹ ಪ್ರಾಣಿಗಳ ಅಂಗಾಂಗಗಳನ್ನು ಸಂಯೋಜಿಸಿ ಸೃಷ್ಟಿಸಲಾದ ಒಂದು ವಿಶಿಷ್ಟ ಕಾಲ್ಪನಿಕ ರೂಪವೇ ವ್ಯಾಳ. ಇದು ಬುದ್ಧಿವಂತಿಕೆ ಮತ್ತು ಅಪಾರ ಶಕ್ತಿಯ ಸಂಕೇತ.

ಇವು ನಕಾರಾತ್ಮಕ ಶಕ್ತಿಗಳು ಅಥವಾ ಕೆಟ್ಟ ದೃಷ್ಟಿ ದೇವಾಲಯದೊಳಗೆ ಪ್ರವೇಶಿಸದಂತೆ ತಡೆಯುವ ‘ರಕ್ಷಕರು’ ಎಂಬ ಭಾವನೆ ಇದ್ದು, ದೇವಾಲಯಗಳ ಪ್ರವೇಶ ದ್ವಾರಗಳು, ಕಂಬಗಳಲ್ಲಿ ಇವುಗಳನ್ನು ಕೆತ್ತುವ ಸಂಪ್ರದಾಯ ಇದೆ.

Publication Date
25/05/2026

Presented by ಪ್ರಜಾವಾಣಿ

# ‘ದ್ವೇಷ ಭಾಷಣ’: ಕೇಂದ್ರ ಅಡ್ಡಿ


## ಪ್ರಸ್ತಾವಿತ ಮಸೂದೆ ಈ ಹಂತದಲ್ಲಿ ಅಗತ್ಯವಿಲ್ಲ: ಗೃಹ ಸಚಿವಾಲಯ ಅಭಿಪ್ರಾಯ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ದ್ವೇಷ ಭಾಷಣ ಮತ್ತು ದ್ವೇಷಾಪರಾಧ ಎಸಗುವವರನ್ನು ಶಿಕ್ಷೆಗೆ ಗುರಿಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ರೂಪಿಸಿರುವ ಮಹತ್ವಾಕಾಂಕ್ಷಿ ಮಸೂದೆಗೆ ಕೇಂದ್ರ ಸರ್ಕಾರ ಅಡ್ಡಗಾಲು ಹಾಕಿದೆ.

### ಮುಖ್ಯಾಂಶಗಳು

- ಬೆಳಗಾವಿ ಅಧಿವೇಶನದಲ್ಲಿ ಅಂಗೀಕಾರಗೊಂಡಿದ್ದ ಮಸೂದೆ
- ರಾಷ್ಟ್ರಪತಿ ಅಂಕಿತಕ್ಕೆ ಕಾಯ್ದಿರಿಸಿದ್ದ ರಾಜ್ಯಪಾಲ
- ಪ್ರಸ್ತಾವಿತ ಮಸೂದೆಯ ಅಗತ್ಯ ಪ್ರಶ್ನಿಸಿದ ಕೇಂದ್ರ



ದ್ವೇಷ ಭಾಷಣ ಹಾಗೂ ದ್ವೇಷಾಪರಾಧಗಳನ್ನು ತಡೆಯಲು ‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳು (ಪ್ರತಿಬಂಧಕ) ಮಸೂದೆ -2025’ ಅನ್ನು ಸಿದ್ಧಪಡಿಸಿ, ಅಂಕಿತಕ್ಕಾಗಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಸರ್ಕಾರ ಕಳುಹಿಸಿತ್ತು. ಆದರೆ, ಹಲವು ಕಾರಣಗಳನ್ನು ನೀಡಿ ಅಂಕಿತ ಹಾಕಲು ನಿರಾಕರಿಸಿದ್ದ ರಾಜ್ಯಪಾಲರು, ಮಸೂದೆಯನ್ನು ರಾಷ್ಟ್ರಪತಿಯ ವಿವೇಚನೆಗೆ ಕಾಯ್ದಿರಿಸಿದ್ದರು. ರಾಜ್ಯ ಸರ್ಕಾರ ರಾಷ್ಟ್ರಪತಿಯ ಅಂಕಿತಕ್ಕೆ ರವಾನಿಸಿತ್ತು.

ಆದರೆ, ‘ಇಂಥದ್ದೊಂದು ಮಸೂದೆಯ ಅಗತ್ಯ ಇದೆಯೇ’ ಎಂದು ಪ್ರಶ್ನಿಸಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಪತ್ರ ಬರೆದಿದೆ.

‘ಪ್ರಸ್ತಾವಿತ ಮಸೂದೆಯಲ್ಲಿರುವ ಅಂಶಗಳು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)–2023ರ ವ್ಯಾಪ್ತಿಯಲ್ಲಿ ಮತ್ತು ಈಗಾಗಲೇ ಜಾರಿಯಲ್ಲಿರುವ ಕಾನೂನುಗಳ ಅಡಿಯಲ್ಲಿ ಸೇರಿಕೊಂಡಿವೆ. ಹೀಗಿರುವಾಗ, ರಾಜ್ಯ ಸರ್ಕಾರವು ಪ್ರತ್ಯೇಕ ಕಾನೂನು ಜಾರಿಗೊಳಿಸುವುದರಿಂದ ನಕಲು ಅಥವಾ ಏಕರೂಪತೆಯ ಕೊರತೆ ಆಗಬಹುದು’ ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ (ಕೇಂದ್ರ–ರಾಜ್ಯ ವಿಭಾಗ) ತನ್ನ ಪತ್ರದಲ್ಲಿ ಅಭಿಪ್ರಾಯಪಟ್ಟಿದೆ.

‘ಈ ಅಂಶಗಳ ಕಾರಣಕ್ಕೆ ಪ್ರಸ್ತಾವಿತ ಮಸೂದೆಯು ಈ ಹಂತದಲ್ಲಿ ಅಗತ್ಯವಿಲ್ಲವೆಂದು ಭಾವಿಸಲಾಗಿದೆ. ಅಲ್ಲದೆ, ಈ ಮಸೂದೆಯಲ್ಲಿ ಉಲ್ಲೇಖಿಸಿರುವ ಎಲ್ಲ ಕಳವಳಗಳನ್ನು ಪರಿಹರಿಸಲು ಸದ್ಯ ಜಾರಿಯಲ್ಲಿರುವ ಕಾನೂನು ಚೌಕಟ್ಟು ಸಾಕು’ ಎಂದೂ ಸಚಿವಾಲಯ ಸ್ಪಷ್ಟವಾಗಿ ಹೇಳಿದೆ. ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಈ ಅಭಿಪ್ರಾಯ ನೀಡಲಾಗಿದೆ ಎಂದು ತಮ್ಮ ಇಲಾಖೆಯ ಕಾನೂನು ಘಟಕಕ್ಕೆ ಸಚಿವಾಲಯದ ಉಪ ಕಾರ್ಯದರ್ಶಿ ಸುಭಾಷ್ ಕುಮಾರ್ ತಿಳಿಸಿದ್ದಾರೆ.

▶7

### ಮಸೂದೆಯಲ್ಲಿ ಏನಿದೆ?



ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಸಿದ್ಧಪಡಿಸಿದ್ದ ಈ ಮಸೂದೆಯು 2025ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದಿದ್ದ ವಿಧಾನಮಂಡಲ ಅಧಿವೇಶನದಲ್ಲಿ ಬಿಜೆಪಿ ಸದಸ್ಯರ ತೀವ್ರ ವಿರೋಧ ಮತ್ತು ಪ್ರತಿಭಟನೆ ನಡುವೆ ಅಂಗೀಕಾರಗೊಂಡಿತ್ತು. ದ್ವೇಷ ಭಾಷಣ ಪ್ರಸರಣೆ, ಪ್ರಕಟಣೆ, ಪ್ರಚಾರ ತಡೆಯಲು, ನಿರ್ದಿಷ್ಟ ವ್ಯಕ್ತಿ, ಸಮೂಹ, ಸಂಸ್ಥೆಗಳ ವಿರುದ್ಧ ದ್ವೇಷ ಹುಟ್ಟಿಸುವ ಅಪರಾಧಗಳನ್ನು ತಡೆಯಲು ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಮೊದಲ ಬಾರಿಗೆ ದ್ವೇಷ ಭಾಷಣ ಮಾಡಿದರೆ ಅಥವಾ ದ್ವೇಷ ಅಪರಾಧದಲ್ಲಿ ಭಾಗಿಯಾದರೆ ಕನಿಷ್ಠ 1 ವರ್ಷ, ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ, ಪುನರಾವರ್ತನೆ ಮಾಡಿದರೆ ಕನಿಷ್ಠ 2 ವರ್ಷದಿಂದ ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ, ₹1 ಲಕ್ಷ ದಂಡ ವಿಧಿಸಲು ಅವಕಾಶ ನೀಡಲಾಗಿತ್ತು. ದ್ವೇಷ ಭಾಷಣ ಮಾಡಿದರೆ ಕಾನೂನಿನ ಅಡಿಯಲ್ಲಿ ಪ್ರಕರಣ ದಾಖಲಾದರೆ ಜಾಮೀನುರಹಿತ ಪ್ರಕರಣವಾಗಲಿದೆ. ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಮೂಲಕ ದ್ವೇಷ ಭಾಷಣಗಳ ವಿಚಾರಣೆಗೂ ಅವಕಾಶ ನೀಡಲಾಗಿದೆ.

Publication Date
25/05/2026

Presented by ಪ್ರಜಾವಾಣಿ

# ಯುದ್ಧ ಅಂತ್ಯ: ಇರಾನ್– ಅಮೆರಿಕ ಒಪ್ಪಿಗೆ?

**ಟೆಹರಾನ್ (ಎಎಫ್‌ಪಿ):** ಪಶ್ಚಿಮ ಏಷ್ಯಾದ ಯುದ್ಧ ಕೊನೆಗೊಳಿಸಲು ಅಮೆರಿಕ ಹಾಗೂ ಇರಾನ್ ಒಪ್ಪಂದಕ್ಕೆ ಮುಂದಾಗಿವೆ ಎಂದು ಅಮೆರಿಕದ ಉನ್ನತ ರಾಜತಾಂತ್ರಿಕರೊಬ್ಬರು ತಿಳಿಸಿದ್ದಾರೆ.



‘ಆದರೆ, ಈ ಒಪ್ಪಂದವು ತನ್ನ ಪರಮಾಣು ಕಾರ್ಯಕ್ರಮದ ಮೇಲೆ ಕಡಿವಾಣ ಹಾಕುವಂತಿಲ್ಲ’ ಎಂದು ಇರಾನ್ ಹೇಳಿದೆ.

ಅಮೆರಿಕ ಹಾಗೂ ಇರಾನ್‌ನ ನಡುವೆ ಏಪ್ರಿಲ್ 8ರಿಂದ ಕದನ ವಿರಾಮ ಜಾರಿಯಲ್ಲಿದೆ. ಮಧ್ಯವರ್ತಿಗಳು ಮಾತುಕತೆಯ ಮೂಲಕ ಇತ್ಯರ್ಥ ಪಡಿಸಲು ಯತ್ನಿಸುತ್ತಿದ್ದರೂ, ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್ ಹಿಡಿತ ಸಾಧಿಸಿದ್ದು, ಇರಾನ್‌ನ ಬಂದರಿನ ಮೇಲೆ ಅಮೆರಿಕ ನಿರ್ಬಂಧ ಮುಂದುವರಿದಿದೆ.

▶10

### ಒಪ್ಪಂದಕ್ಕೆ ಅವಸರ ಇಲ್ಲ: ಟ್ರಂಪ್



**ವಾಷಿಂಗ್ಟನ್ (ಎಎಫ್‌ಪಿ):** ‘ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಕೊನೆಗಾಣಿಸುವುದಕ್ಕಾಗಿ ಇರಾನ್ ಜೊತೆ ಒಪ್ಪಂದ ಮಾಡಿಕೊಳ್ಳುವ ವಿಷಯದಲ್ಲಿ ಅಮೆರಿಕ ಅವಸರ ಮಾಡುವುದಿಲ್ಲ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದಾರೆ.

▶10

### ವ್ಯಾಪಾರ ಒಪ್ಪಂದಕ್ಕೆ ಶೀಘ್ರ ಅಂತಿಮ ರೂಪ

ಬಹು ನಿರೀಕ್ಷಿತ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಭಾರತ ಮತ್ತು ಅಮೆರಿಕ ಶೀಘ್ರವೇ ಅಂತಿಮ ರೂಪ ನೀಡಲಿವೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ವಿವರ ▶11

Publication Date
25/05/2026

Presented by ಪ್ರಜಾವಾಣಿ

# ದತ್ತು ಸರಳ, ಆದಾಯ ಹೆಚ್ಚಳ

## ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿ ದತ್ತು ಯೋಜನೆ: ಸೆಲೆಬ್ರಿಟಿಗಳೆಡೆಗೆ ಗಮನ

ಪ್ರಜಾವಾಣಿ ವಾರ್ತೆ

| ವರ್ಷ | ದತ್ತು ಮೊತ್ತ | ದತ್ತು ಪಡೆದವರು |
|---|---|---|
| 2021-22 | ₹1.92 ಕೋಟಿ | 970 |
| 2022-23 | ₹66.07 ಲಕ್ಷ | 448 |
| 2023-24 | ₹72.51 ಲಕ್ಷ | 398 |
| 2024-25 | ₹53.84 ಲಕ್ಷ | 413 |
| 2025-26 | ₹80.75 ಲಕ್ಷ | 395 |

**ಬೆಂಗಳೂರು:** ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ(ಬಿಬಿಪಿ) ಪ್ರಾಣಿ, ಪಕ್ಷಿಗಳ ದತ್ತು ಪಡೆಯುವುದನ್ನು ಉತ್ತೇಜಿಸಲು ಕೈಗೊಂಡ ಸುಧಾರಣಾ ಕ್ರಮಗಳು ಫಲ ನೀಡುತ್ತಿವೆ. ದತ್ತು ಯೋಜನೆಯಡಿ ಒಂದೇ ವರ್ಷದಲ್ಲಿ ₹30 ಲಕ್ಷಕ್ಕೂ ಹೆಚ್ಚು ಆದಾಯ ಲಭಿಸಿದೆ.

ಜನರಲ್ಲಿ ಪ್ರಾಣಿ, ಪಕ್ಷಿಗಳ ಮೇಲಿನ ಪ್ರೀತಿ ಹೆಚ್ಚಿಸುವ ನಿಟ್ಟಿನಲ್ಲಿ ಉದ್ಯಾನವು ಕೆಲವು ವರ್ಷಗಳ ಹಿಂದೆ ಪ್ರಾಣಿ ದತ್ತು ಯೋಜನೆ ಆರಂಭಿಸಿದೆ. ಹುಲಿ, ಸಿಂಹ, ಚಿರತೆ, ಆನೆ, ಜಿರಾಫ್ ಸಹಿತ ಪ್ರಮುಖ ಪ್ರಾಣಿಗಳು ಮಾತ್ರವಲ್ಲದೇ ಪುಟ್ಟ ಪ್ರಾಣಿ, ಪಕ್ಷಿಗಳನ್ನು ವರ್ಷದ ಮಟ್ಟಿಗೆ ದತ್ತು ಪಡೆಯಲು ಅವಕಾಶ ನೀಡಲಾಗಿತ್ತು.

ಕೋವಿಡ್ ಕಾಲದಲ್ಲಿ ಪ್ರಾಣಿ, ಪಕ್ಷಿಗಳಿಗೆ ಆಹಾರ ಒದಗಿಸಲು ದೇಣಿಗೆಯೂ ಸೇರಿದಂತೆ ದತ್ತು ಯೋಜನೆಯಡಿ ಸುಮಾರು ₹2 ಕೋಟಿ ಆದಾಯ ಲಭಿಸಿತ್ತು. ಆ ನಂತರ ಕಡಿಮೆಯಾಗಿತ್ತು.

ಜೈವಿಕ ಉದ್ಯಾನಕ್ಕೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು, ಬೆಂಗಳೂರಿನಂತಹ ನಗರದಲ್ಲಿ ಪ್ರಮುಖ ಸೆಲೆಬ್ರಿಟಿಗಳು, ವಿವಿಧ ಕ್ಷೇತ್ರದ ಗಣ್ಯರು ಇದ್ದರೂ ಯೋಜನೆಗೆ ನಿರೀಕ್ಷಿತ ಪ್ರತಿಕ್ರಿಯೆ ಬಂದಿರಲಿಲ್ಲ. ಈ ಕಾರಣದಿಂದ ಕಳೆದ ವರ್ಷ ಕೆಲ ನಿಯಮಗಳನ್ನು ಬದಲಿಸಿದ್ದು, ಹೊಸ ಮಾರ್ಗಸೂಚಿಗಳನ್ನು ಬಿಬಿಪಿ ರೂಪಿಸಿದೆ.

ನಟಿ ಸಂಯುಕ್ತ ಹೊರನಾಡು ಅವರು ಸಿಂಚನಾ ಹೆಸರಿನ ಹುಲಿಯನ್ನು ವರ್ಷದ ಅವಧಿಗೆ ₹2 ಲಕ್ಷ ಪಾವತಿಸಿ ದತ್ತು ಪಡೆದಿದ್ದಾರೆ. ಉಳಿದಂತೆ ಉದ್ಯಮ ವಲಯ, ವಿವಿಧ ಸಂಸ್ಥೆಯವರು ದತ್ತು ಪಡೆದುಕೊಂಡಿದ್ದಾರೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಮಾದರಿಯಲ್ಲಿಯೇ ದತ್ತು ಯೋಜನೆ ಮತ್ತಷ್ಟು ಜನಪ್ರಿಯಗೊಳಿಸಲು ಸೆಲೆಬ್ರೆಟಿಗಳತ್ತ ಗಮನ ಹರಿಸುತ್ತಿದೆ. ಸಾಮಾಜಿಕ ಮಾಧ್ಯಮ ಬಳಸಿಕೊಂಡು ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

> **ಈ ವರ್ಷ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ (ಎನ್‌ಟಿಪಿಸಿ) ₹40 ಲಕ್ಷ ದತ್ತು ಮೊತ್ತ ನೀಡಿದೆ. ಇನ್ನೂ ಕೆಲವರನ್ನು ಸಂಪರ್ಕಿಸುತ್ತಿದ್ದೇವೆ**
> **ಎ.ವಿ.ಸೂರ್ಯಸೇನ್,** ಇಡಿ, ಬನ್ನೇರುಘಟ್ಟ ಜೈವಿಕ ಉದ್ಯಾನ

ಮೊದಲು ಒಂದು ವರ್ಷಕ್ಕೆ ದತ್ತು ಪಡೆಯಲು ಇದ್ದ ಅವಕಾಶವನ್ನು ಈಗ ಐದು ವರ್ಷಕ್ಕೆ ವಿಸ್ತರಣೆ ಮಾಡಿದೆ. ಹೊಸ ನೀತಿಯಡಿ 5 ವರ್ಷಗಳ ವರೆಗೆ ದತ್ತು ಪಡೆಯಲು ಅವಕಾಶವಿದೆ. ಇದಲ್ಲದೇ ನಿಮಗೆ ಇಷ್ಟವಾದ ಪ್ರಾಣಿಗಳಿಗೆ ಹೆಸರಿಡುವ ಅವಕಾಶವನ್ನೂ ಮಾಡಿಕೊಡಲಾಗಿದೆ.

ದತ್ತು ಪಡೆದವರಿಗೆ ಪ್ರಮಾಣಪತ್ರ, ಪ್ರಾಣಿ, ಪಕ್ಷಿ ಮನೆ ಆವರಣದಲ್ಲಿ ದತ್ತು ಪಡೆದವರ ಹೆಸರಿನ ಫಲಕ, 5 ವರ್ಷಗಳವರೆಗೆ ವಾರ್ಷಿಕ 5 ಉಚಿತ ಪ್ರವೇಶ ಪಾಸ್ ಕೂಡ ನೀಡಲಾಗುತ್ತದೆ.

**ನಾಲ್ಕು ವರ್ಷ ಬಳಿಕೆ ಚೇತರಿಕೆ:** ಕೋವಿಡ್ ಕಾಲದಲ್ಲಿ ಉದ್ಯಾನ ಮೂರ್ನಾಲ್ಕು ತಿಂಗಳು ಬಂದ್ ಆಗಿದ್ದರಿಂದ ಆದಾಯ ಕುಸಿತಗೊಂಡು ಪ್ರಾಣಿ, ಪಕ್ಷಿಗಳಿಗೆ ಆಹಾರ ಒದಗಿಸುವುದು ಕಷ್ಟವಾಗಿತ್ತು. ಆಗ ಹಲವಾರು ಮಂದಿ ದತ್ತು ನೀಡಲು, ಒಂದು ದಿನದ ಆಹಾರ ಒದಗಿಸುವ ಜತೆಗೆ ದೇಣಿಗೆ ನೀಡಲು ಮುಂದೆ ಬಂದರು.

2021-22ರಲ್ಲಿ ಪ್ರತಿ ವರ್ಷ ದತ್ತು ಯೋಜನೆಯಡಿ ಸಂಗ್ರಹವಾಗುವ ಆರ್ಥಿಕ ಸಂಪನ್ಮೂಲದ ಮೂರು ಪಟ್ಟು ಸಂಗ್ರಹವಾಗಿತ್ತು. ಇದರಲ್ಲಿ 770 ಮಂದಿ ಪ್ರಾಣಿ, ಪಕ್ಷಿ ದತ್ತು ಪಡೆದಿದ್ದರಿಂದ ₹1.24 ಕೋಟಿ, ಒಂದು ದಿನದ ಆಹಾರ ಒದಗಿಸುವ ಚಟುವಟಿಕೆಯಡಿ 200 ಮಂದಿ ನೆರವಾಗಿದ್ದರಿಂದ ₹10.52 ಲಕ್ಷ, ದೇಣಿಗೆ ರೂಪದಲ್ಲಿ ₹57.47 ಲಕ್ಷ ಸೇರಿ ಒಟ್ಟು ₹1.92 ಕೋಟಿ ಸಂಗ್ರಹವಾಗಿತ್ತು. ಇದು ಬಿಬಿಪಿ ಇತಿಹಾಸದಲ್ಲಿ ದಾಖಲೆಯಾಗಿದೆ.

'ಮೂರ್ನಾಲ್ಕು ವರ್ಷದಿಂದ ವಿವಿಧ ಕ್ಷೇತ್ರದವರನ್ನು ಸಂಪರ್ಕಿಸುತ್ತಲೇ ಇದ್ದೇವೆ. ಕೆಲವರು ಆಸಕ್ತಿ ತೋರಿಸುತ್ತಾರೆ. ಹೆಚ್ಚಿನ ಮಂದಿ ದತ್ತು ಪಡೆಯಲು ಮುಂದೆ ಬರುತ್ತಿಲ್ಲ. ಆದರೂ, ಉದ್ಯಾನಕ್ಕೆ ಬರುವ ಪ್ರತಿಯೊಬ್ಬ ವೀಕ್ಷಕರಿಗೂ ಮಾಹಿತಿ ನೀಡಿದರ ಫಲವಾಗಿ ಈ ವರ್ಷ ಆದಾಯ ಹೆಚ್ಚಿದ್ದು, ಮುಂದಿನ ವರ್ಷದಲ್ಲಿ ಏರಿಕೆಯಾಗಿ ಪ್ರಾಣಿ, ಪಕ್ಷಿ ನಿರ್ವಹಣೆಗೆ ಸಹಕಾರಿಯಾಗಲಿದೆ' ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ತಿಳಿಸಿದರು.



ಬನ್ನೇರುಘಟ್ಟ ಜೈವಿಕ ಉದ್ಯಾನದ ಚಿರತೆ

### ದತ್ತು ಪಡೆಯೋದು ಹೇಗೆ?

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿ ದತ್ತು ಕಾರ್ಯಕ್ರಮದಡಿ ಆನೆ, ಹುಲಿ, ಸಿಂಹ, ಚಿರತೆ ಸಹಿತ ವಿವಿಧ ಪ್ರಾಣಿ/ಪಕ್ಷಿಗಳನ್ನು ದತ್ತು ಪಡೆಯಲು ಅವಕಾಶವಿದೆ.

ಉದ್ಯಾನದಲ್ಲಿ 26 ಆನೆ, 20 ಹುಲಿ, 56 ಕರಡಿ, 27 ಸಿಂಹ, 85 ಚಿರತೆಗಳು ಇವೆ. 357 ಹಕ್ಕಿ, 1,619 ಸಸ್ತನಿಗಳು, 206 ಸರೀಸೃಪಗಳು ಇವೆ. ಒಂದು ಆನೆಗೆ ವರ್ಷಕ್ಕೆ ₹3 ಲಕ್ಷ ದತ್ತು ದರವಿದ್ದರೆ, ಹುಲಿ, ಸಿಂಹ, ಜಿರಾಫೆಗೆ ₹2 ಲಕ್ಷ ನಿಗದಿಪಡಿಸಲಾಗಿದೆ. ನೀರಾನೆಗೆ ₹1.50 ಲಕ್ಷ, ಹೆಸರಗತ್ತೆಗೆ ₹75 ಸಾವಿರ ದತ್ತು ದರವಿದೆ. ಇವೆಲ್ಲವೂ ಡೈಮಂಡ್ ಗ್ರೂಪ್‌ನಲ್ಲಿವೆ.

ಚಿನ್ನದ ಗ್ರೂಪ್‌ನಲ್ಲಿ ಚಿರತೆ, ಕರಡಿ, ಕಾಡುಕೋಣ ಸೇರಿದ್ದು, ಇವುಗಳ ದತ್ತು ದರ ವಾರ್ಷಿಕ ₹50 ಸಾವಿರದಷ್ಟಿದೆ. ಬೆಳ್ಳಿ ಹಾಗೂ ಕಂಚಿನ ಅಡಿ ವಿವಿಧ ಪ್ರಾಣಿ ಪಕ್ಷಿಗಳಿದ್ದು, ₹1 ಸಾವಿರದಿಂದ ₹15 ಸಾವಿರದವರೆಗೂ ದರವಿದೆ.

ಬಿಬಿಪಿ ವೆಬ್‌ಸೈಟ್ https://bannerughattabiopark.org/adopt.html ಮೂಲಕ ಸಂಪರ್ಕಿಸಿ ದತ್ತು ಪಡೆಯಬಹುದು. ಇಲ್ಲವೇ ಉದ್ಯಾನಕ್ಕೆ ಭೇಟಿ ನೀಡಿ ದತ್ತು ಸ್ವೀಕರಿಸಲು ಅವಕಾಶವಿದೆ. 80ಜಿ ಅಡಿ ಇದಕ್ಕೆ ತೆರಿಗೆ ವಿನಾಯಿತಿ ಪಡೆಯಬಹುದು ಎಂದು ಅಧಿಕಾರಿಗಳು ತಿಳಿಸಿದರು.

Publication Date
25/05/2026

Presented by ಪ್ರಜಾವಾಣಿ

# ಸಕ್ಕರೆ ರಫ್ತಿಗೆ ಅನುಮತಿ

ನವದೆಹಲಿ (ಪಿಟಿಐ): ಅಮೆರಿಕಕ್ಕೆ 8,606 ಟನ್ ಕಡಿಮೆ ಸಂಸ್ಕರಿತ ಸಕ್ಕರೆ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಸುಂಕ ವಿನಾಯಿತಿ ಕೋಟಾದ (ಟಿಆರ್‌ಕ್ಯು) ಅಡಿಯಲ್ಲಿ ಸಕ್ಕರೆ ರಫ್ತಿಗೆ ಅನುಮತಿ ನೀಡಲಾಗಿದೆ. ಇದು ಸೆಪ್ಟೆಂಬರ್ ಅಂತ್ಯದವರೆಗೆ ಇರಲಿದೆ ಎಂದು ವಿದೇಶಿ ವ್ಯಾಪಾರಗಳ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ಅಧಿಸೂಚನೆಯಲ್ಲಿ ತಿಳಿಸಿದೆ.

ಈ ವರ್ಷದ ಸೆಪ್ಟೆಂಬರ್ 30ರವರೆಗೆ ಸಾಮಾನ್ಯ ಸಕ್ಕರೆ ರಫ್ತಿಗೆ ನಿಷೇಧ ಹೇರಿದೆ.

Publication Date
25/05/2026
Presented by ಪ್ರಜಾವಾಣಿ

### ದಾಳಿ ದೃಢಪಡಿಸಿದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ

# ಕೀವ್ ಮೇಲೆ ಹೈಪರ್‌ಸಾನಿಕ್ ಒರೆಶ್ನಿಕ್ ಕ್ಷಿಪಣಿ ದಾಳಿ

ಕೀವ್(ಎಪಿ): ಉಕ್ರೇನ್ ರಾಜಧಾನಿ ಕೀವ್ ಮೇಲೆ ರಷ್ಯಾ ಭಾನುವಾರ ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸಿದೆ. ಈ ಸಂದರ್ಭದಲ್ಲಿ ಹೈಪರ್‌ಸಾನಿಕ್ ಒರೆಶ್ನಿಕ್ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ಸಹ ನಡೆಸಿದೆ.

ನಾಲ್ಕು ವರ್ಷಗಳಿಂದ ಉಕ್ರೇನ್ ವಿರುದ್ಧದ ನಡೆಯುತ್ತಿರುವ ಯುದ್ಧದಲ್ಲಿ ಈ ಶಸ್ತ್ರಾಸ್ತ್ರವನ್ನು ಮೂರನೇ ಬಾರಿಗೆ ಬಳಸಲಾಗಿದೆ. ಮೊದಲ ಬಾರಿಗೆ 2024ರ ನವೆಂಬರ್‌ನಲ್ಲಿ ಬಳಸಲಾಗಿತ್ತು. ನಂತರ 2025ರ ಜನವರಿಯಲ್ಲಿ ಪಶ್ಚಿಮ ಎಲ್ವಿವ್ ಪ್ರದೇಶದ ಮೇಲೆ ಬಳಸಲಾಗಿತ್ತು.

ಕ್ಷಿಪಣಿ ದಾಳಿಯಲ್ಲಿ ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ ಮತ್ತು ಕನಿಷ್ಠ 83 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ತಿಳಿಸಿದ್ದಾರೆ.

ತೀವ್ರವಾದ ವೈಮಾನಿಕ ದಾಳಿಯಿಂದಾಗಿ ಕೀವ್ ನಗರದಲ್ಲಿರುವ ಸರ್ಕಾರಿ ಕಚೇರಿಗಳು, ವಸತಿ ಕಟ್ಟಡಗಳು, ಶಾಲೆಗಳು, ಮಾರುಕಟ್ಟೆ ಮತ್ತು ಶಾಲೆಗಳ ಸಮೀಪವಿರುವ ಕಟ್ಟಡಗಳು ಹಾನಿಗೊಳಗಾಗಿವೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ಪರಮಾಣು ಅಥವಾ ಸಾಂಪ್ರದಾಯಿಕ ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯವಿರುವ ಒರೆಶ್ನಿಕ್, ಕೀವ್ ನಗರದ ಬಿಲಾ ತ್ಸೆರ್ಕ್ವಾ ಪ್ರದೇಶದ ಮೇಲೆ ತೀವ್ರ ದಾಳಿ ನಡೆಸಿದೆ ಎಂದು ಝೆಲೆನ್ಸ್ಕಿ ಟೆಲಿಗ್ರಾಮ್‌ನಲ್ಲಿ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಉಕ್ರೇನ್‌ನ ಮಿಲಿಟರಿ ಕಮಾಂಡ್ ಮತ್ತು ನಿಯಂತ್ರಣ ಸೌಲಭ್ಯಗಳು, ವಾಯುನೆಲೆಗಳು ಮತ್ತು ಮಿಲಿಟರಿ ಕೈಗಾರಿಕಾ ಉದ್ಯಮಗಳನ್ನು ಹೊಡೆದುರುಳಿಸಲು ಒರೆಶ್ನಿಕ್ ಜೊತೆಗೆ ಇತರೆ ಬೇರೆ ರೀತಿಯ ಕ್ಷಿಪಣಿಗಳನ್ನು ಬಳಸಲಾಗಿದೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯವು ಭಾನುವಾರ ದೃಢಪಡಿಸಿದೆ.

ಯಾವುದನ್ನು ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಸಲಾಗಿದೆ ಎಂಬುದನ್ನು ಸಚಿವಾಲಯ ಸ್ಪಷ್ಟಪಡಿಸಿಲ್ಲ. ರಾತ್ರಿ ನಡೆದ ದಾಳಿಯಲ್ಲಿ ಯಾವುದೇ ನಾಗರಿಕ ಸ್ಥಳಗಳನ್ನು ಗುರಿಯಾಗಿಸಿಕೊಂಡಿಲ್ಲ ಎಂದು ಸಚಿವಾಲಯದ ಅಧಿಕಾರಿಗಳು ರಷ್ಯಾದ ಮಾಧ್ಯಮಗಳಿಗೆ ತಿಳಿಸಿದ್ದಾರೆ ಎಂದು ಟಾಸ್ ಸ್ಟೇಟ್ ಏಜೆನ್ಸಿ ಭಾನುವಾರ ವರದಿ ಮಾಡಿದೆ.

'ರಷ್ಯಾದ ಭೂಪ್ರದೇಶದಲ್ಲಿರುವ ನಾಗರಿಕ ಸೌಲಭ್ಯಗಳ ಮೇಲೆ ಉಕ್ರೇನ್ ನಡೆಸಿದ ದಾಳಿಗೆ ಪ್ರತೀಕಾರವಾಗಿ ಈ ದಾಳಿ ನಡೆಸಲಾಗಿದೆ' ಎಂದು ಸಚಿವಾಲಯವು ಹೇಳಿದೆ.

ಕಿವ್ ರಾಜಧಾನಿಯ ಹಲವು ಜಿಲ್ಲೆಗಳಲ್ಲಿನ ವಸತಿ ಕಟ್ಟಡಗಳು, ಶಾಪಿಂಗ್ ಮಾಲ್‌ಗಳು, ಶಾಲೆಗಳು ಸೇರಿದಂತೆ 50 ಸ್ಥಳಗಳಲ್ಲಿ ಹಾನಿ ದಾಖಲಾಗಿದೆ.

### 'ಉಕ್ರೇನ್‌ನಲ್ಲಿ ವಾಯು ರಕ್ಷಣಾ ಕ್ಷಿಪಣಿ ಕೊರತೆ'



ಝೆಲೆನ್‌ಸ್ಕಿ

ರಷ್ಯಾ ಭಾರಿ ಪ್ರಮಾಣದ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸಿದ್ದು, ರಾಜಧಾನಿ ಕೀವ್ ನಗರವೇ ದಾಳಿಯ ಮುಖ್ಯ ಗುರಿಯಾಗಿತ್ತು. ಎಲ್ಲಾ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಡೆಹಿಡಿಯಲು ಸಾಧ್ಯವಾಗಿಲ್ಲ ಮತ್ತು ಕೀವ್‌ನಲ್ಲಿಯೇ ಹೆಚ್ಚಿನ ಹಾನಿಯಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಖಚಿತಪಡಿಸಿದ್ದಾರೆ.

ಉಕ್ರೇನ್, ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಬಲ್ಲ ಸುಧಾರಿತ ಕ್ಷಿಪಣಿಗಳ ತೀವ್ರ ಕೊರತೆಯನ್ನು ಎದುರಿಸುತ್ತಿದೆ. ಇಂಥಹ ಶಸ್ತ್ರಾಸ್ತ್ರಗಳನ್ನು ಹೊಂದಲು, ಉಕ್ರೇನ್, ಅಮೆರಿಕದ ಪೇಟ್ರಿಯಟ್ ವಾಯು ರಕ್ಷಣಾ ವ್ಯವಸ್ಥೆಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಇಂಥ ಪ್ರತಿಬಂಧಕ ಕ್ಷಿಪಣಿಗಳ ಕೊರತೆ ಉಕ್ರೇನನ್ನು ಕಾಡುತ್ತಿದೆ.

Publication Date
25/05/2026
Presented by ಪ್ರಜಾವಾಣಿ

# ವ್ಯಾಪಾರ ಒಪ್ಪಂದಕ್ಕೆ ಶೀಘ್ರ ಅಂತಿಮ ರೂಪ

## ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಜತೆ ಸಚಿವ ಜೈಶಂಕರ್ ಮಾತುಕತೆ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** ಬಹು ನಿರೀಕ್ಷಿತ ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಭಾರತ ಮತ್ತು ಅಮೆರಿಕ ಶೀಘ್ರವೇ ಅಂತಿಮ ರೂಪ ನೀಡಲಿವೆ. ಈ ಒಪ್ಪಂದವು ಉಭಯ ದೇಶಗಳಿಗೆ ಪ್ರಯೋಜನಕಾರಿಯಾಗಿರುವ ಜೊತೆಗೆ ಸುಸ್ಥಿರವೂ ಅಗಿರಲಿದೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಭಾನುವಾರ ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ದ್ವಿಪಕ್ಷೀಯ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧವು ಹೊಸ ಎತ್ತರಕ್ಕೆ ಏರಲಿದೆ. ಅಮೆರಿಕದ ನಿಯೋಗವೊಂದು ಶೀಘ್ರವೇ ಭಾರತಕ್ಕೆ ಭೇಟಿ ನೀಡಿ, ಉದ್ದೇಶಿತ ವ್ಯಾಪಾರ ಒಪ್ಪಂದಕ್ಕೆ ಅಂತಿಮ ರೂಪ ನೀಡುವ ಕುರಿತ ಮಾತುಕತೆ ಮುಂದುವರಿಸಲಿದೆ' ಎಂದು ಹೇಳಿದ್ದಾರೆ.

ನಾಲ್ಕು ದಿನಗಳ ಭಾರತ ಪ್ರವಾಸ ಕೈಗೊಂಡಿರುವ ಅವರು, ವ್ಯಾಪಾರ, ವಿರಳ ಖನಿಜಗಳು, ಇಂಧನ ಹಾಗೂ ರಕ್ಷಣಾ ಕ್ಷೇತ್ರದಲ್ಲಿ ಭಾರತ ಮತ್ತು ಅಮೆರಿಕ ನಡುವಿನ ಸಹಕಾರ ಬಲಪಡಿಸುವ ಉದ್ದೇಶ ಹೊಂದಿದ್ದು, ಈ ಕುರಿತು ವ್ಯಾಪಕ ಮಾತುಕತೆ ನಡೆಸಿದ್ದಾರೆ.

ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಕಳೆದ ವರ್ಷ ಅಮೆರಿಕ ಜಾರಿಗೆ ತಂದ ಹೊಸ ನೀತಿಗಳಿಂದಾಗಿ ಅಮೆರಿಕ ಮತ್ತು ಭಾರತ ನಡುವಿನ ಸಂಬಂಧದಲ್ಲಿ ಒಡಕು ಮೂಡಿದೆ. ಎರಡೂ ದೇಶಗಳ ನಡುವಿನ ಸಂಬಂಧ ಸುಧಾರಿಸುವ ಪ್ರಯತ್ನದ ಭಾಗವಾಗಿ ರುಬಿಯೊ ಈ ಪ್ರವಾಸ ಕೈಗೊಂಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

> **ವ್ಯಾಪಾರದ ವಿಚಾರವಾಗಿ ಭಾರತದೊಂದಿಗೆ ಸಂಘರ್ಷಕ್ಕೆ ದಾರಿ ಮಾಡುವ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರಲಿಲ್ಲ. ಅಮೆರಿಕದ ಆರ್ಥಿಕತೆಗೆ ವೇಗ ನೀಡುವಲ್ಲಿನ ಸಮಸ್ಯೆಯನ್ನು ಅವರು ಗುರುತಿಸಿದ್ದರು. ಈ ಸಮಸ್ಯೆಗೆ ಜಾಗತಿಕ ದೃಷ್ಟಿಕೋನದಿಂದ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ**
>
> **ಮಾರ್ಕೊ ರುಬಿಯೊ,** ಅಮೆರಿಕ ವಿದೇಶಾಂಗ ಕಾರ್ಯದರ್ಶಿ

ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ನೀತಿಯನ್ನು ಬಲವಾಗಿ ಸಮರ್ಥಿಸಿಕೊಂಡ ಅವರು, 'ವಿವಿಧ ದೇಶಗಳ ಜೊತೆ ತಾನು ನಡೆಸುವ ವ್ಯಾಪಾರವನ್ನು ಮರು ಹೊಂದಾಣಿಕೆ ಮಾಡುವ ಉದ್ದೇಶದಿಂದ ಅಮೆರಿಕ ಈ ಹೊಸ ನೀತಿ ಜಾರಿಗೊಳಿಸಿದೆ. ಯಾವುದೇ ಒಂದು ನಿರ್ದಿಷ್ಟ ದೇಶದ ವಿರುದ್ಧ ಕ್ರಮ ಕೈಗೊಳ್ಳುವುದಕ್ಕಾಗಿ ಅಲ್ಲ' ಎಂದರು.

'ಇತರ ದೇಶಗಳೊಂದಿಗೆ ಅಮೆರಿಕ ಹೊಂದಿರುವ ಸಂಬಂಧವು ಭಾರತದೊಂದಿಗಿನ ಬಾಂಧವ್ಯದ ಮೇಲೆ ಪರಿಣಾಮ ಬಿಡುವುದಿಲ್ಲ' ಎಂದು ರುಬಿಯೊ ಹೇಳಿದರು. ಆ ಮೂಲಕ, ಪಾಕಿಸ್ತಾನ ಹಾಗೂ ಚೀನಾ ಜೊತೆ ಅಮೆರಿಕ ಸಂಬಂಧ ಹೊಂದಿರುವ ಕುರಿತು ಭಾರತದಲ್ಲಿ ಮೂಡಿರುವ ಆತಂಕವನ್ನು ದೂರ ಮಾಡುವ ಪ್ರಯತ್ನವನ್ನು ರುಬಿಯೊ ಮಾಡಿದರು.

'ನಾನು ಭೇಟಿ ನೀಡಿ ಪ್ರತಿಯೊಂದು ದೇಶವೂ ವ್ಯಾಪಾರದ ವಿಚಾರವಾಗಿ ತನ್ನ ಕಳವಳ ವ್ಯಕ್ತಪಡಿಸಿದೆ. ಇದೇ ಕಾರಣಕ್ಕೆ ಅಮೆರಿಕದ ವ್ಯಾಪಾರವನ್ನು ಮರುಹೊಂದಾಣಿಕೆ ಮಾಡುವ ಅಗತ್ಯವಿದೆ ಎಂದು ಟ್ರಂಪ್ ಹೇಳಿದ್ದರು. ಅವರ ಈ ನಿಲುವು ಕೇವಲ ಭಾರತಕ್ಕಷ್ಟೆ ಸಂಬಂಧಿಸಿದ್ದಲ್ಲ' ಎಂದು ಹೇಳಿದರು.

'ವ್ಯಾಪಾರಕ್ಕೆ ಸಂಬಂಧಿಸಿ ಐರೋಪ್ಯ ಒಕ್ಕೂಟ, ಇತರ ದೇಶಗಳಿಗೂ ಹಾಗೂ ಭಾರತಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಭಾರತ ಬೃಹತ್ ಆರ್ಥಿಕತೆಯಾಗಿದ್ದು, ವ್ಯಾಪಾರದ ದೃಷ್ಟಿಯಿಂದ ಪ್ರಮುಖ ಪಾಲುದಾರ ರಾಷ್ಟ್ರವೂ ಆಗಿದೆ. ಹೀಗಾಗಿ, ಇಂತಹ ದೊಡ್ಡ ದೇಶದೊಂದಿಗೆ ನಡೆಸುವ ವ್ಯಾಪಾರದಲ್ಲಿ ಸಮತೋಲನ ಕಾಪಾಡಿಕೊಳ್ಳುವುದರಲ್ಲೂ ಸಹಜವಾಗಿ ವ್ಯತ್ಯಾಸವಿರುತ್ತದೆ' ಎಂದು ರುಬಿಯೊ ವಿಶ್ಲೇಷಿಸಿದರು.



ನವದೆಹಲಿಯಲ್ಲಿ ಭಾನುವಾರ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಮಾತುಕತೆ ನಡೆಸಿದರು —ಪಿಟಿಐ ಚಿತ್ರ

### 'ಪ್ರತಿಯೊಂದು ದೇಶದಲ್ಲಿ ಮೂರ್ಖರಿದ್ದಾರೆ...'

'ಜಗತ್ತಿನ ಪ್ರತಿಯೊಂದು ದೇಶದಲ್ಲಿ ಮೂರ್ಖ ಜನರಿದ್ದಾರೆ. ಭಾರತದಲ್ಲಿ ಹಾಗೂ ಅಮೆರಿಕದಲ್ಲಿಯೂ ಮೂರ್ಖ ಜನರಿದ್ದು, ಸದಾ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುತ್ತಾರೆ...'

'ಅಮೆರಿಕದಲ್ಲಿ ಇತ್ತೀಚಿನ ದಿನಗಳಲ್ಲಿ ಭಾರತೀಯರು ಹಾಗೂ ಭಾರತೀಯ ಅಮೆರಿಕನ್ನರ ವಿರುದ್ಧ ಜನಾಂಗೀಯ ದ್ವೇಷದ ಮಾತುಗಳು ಕೇಳಿಬರುತ್ತಿವೆ. ಉಭಯ ದೇಶಗಳ ನಡುವಿನ ಬಾಂಧವ್ಯಕ್ಕೆ ಧಕ್ಕೆ ತರುವಂತಹ ಬೆಳವಣಿಗೆ ಇದು. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು' ಎಂದು ಜಂಟಿಸುದ್ದಿಗೋಷ್ಠಿಯಲ್ಲಿ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಮಾರ್ಕೊ ರುಬಿಯೊ ನೀಡಿದ ಪ್ರತಿಕ್ರಿಯೆ ಇದು.

'ಜನಾಂಗೀಯ ದ್ವೇಷದ ಹೇಳಿಕೆ ನೀಡಿರುವ ವಿಚಾರವನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. ನಿಶ್ಚಿತವಾಗಿಯೂ ಆನ್‌ಲೈನ್ ಹಾಗೂ ಇತರ ವೇದಿಕೆಗಳಲ್ಲಿ ಕೆಲವರು ಇಂತಹ ದ್ವೇಷದ ಹೇಳಿಕೆಗಳನ್ನು ನೀಡಿರುತ್ತಾರೆ' ಎಂದರು.

'ಅಮೆರಿಕ ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸುವ ದೇಶ. ವಿಶ್ವದೆಲ್ಲೆಡೆಯಿಂದ ಇಲ್ಲಿಗೆ ಬಂದವರು ಅಮೆರಿಕನ್ನರೇ ಆಗಿಬಿಟ್ಟಿದ್ದಾರೆ. ದೇಶದ ಪ್ರಗತಿಗೆ ಅದ್ಭುತ ಕೊಡುಗೆ ನೀಡಿದ್ದಾರೆ ಎಂದಷ್ಟೆ ನಾನು ಹೇಳಬಲ್ಲೆ' ಎಂದು ಹೇಳಿದರು.

### ವೀಸಾ: ಭಾರತ ಕಳವಳ

ಉದ್ಯೋಗಿಗಳಿಗೆ ನೀಡುವ ವೀಸಾಕ್ಕೆ ಸಂಬಂಧಿಸಿ ಅಮೆರಿಕದ ಹೊಸ ನೀತಿ ಕುರಿತು ಭಾರತ ಭಾನುವಾರ ಕಳವಳ ವ್ಯಕ್ತಪಡಿಸಿದೆ. ಮಾರ್ಕೊ ರುಬಿಯೊ ಅವರೊಂದಿಗೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅಮೆರಿಕಕ್ಕೆ ಕಾನೂನುಬದ್ಧವಾಗಿ ವಲಸೆ ಹೋಗುವವರ ರಕ್ಷಣೆ ಖಾತ್ರಿಪಡಿಸಬೇಕು ಎಂದು ಕೋರಿದರು.

'ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ಹಲವು ವಿಚಾರಗಳಲ್ಲಿ ಎರಡೂ ದೇಶಗಳ ಅಭಿಪ್ರಾಯಗಳು ಒಂದೇ ಆಗಿವೆ. ಕಾನೂನುಬದ್ಧವಾಗಿ ಅಮೆರಿಕಕ್ಕೆ ಪ್ರಯಾಣಿಸುವವರು ವೀಸಾ ಕುರಿತ ಹೊಸ ನೀತಿಯಿಂದ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ' ಎಂದು ರುಬಿಯೊ ಅವರಿಗೆ ಜೈಶಂಕರ್ ವಿವರಿಸಿದರು.

'ಅಕ್ರಮವಾಗಿ ದೇಶ ಪ್ರವೇಶಿಸುವವರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಭಾರತ ಸಹಕಾರ ನೀಡಲಿದೆ. ಆದರೆ, ಅಕ್ರಮ ವಲಸೆ ವಿರುದ್ಧ ನಡೆಸುವ ಪ್ರಹಾರವು ಕಾನೂನುಬದ್ಧವಾಗಿ ಅಮೆರಿಕಕ್ಕೆ ಪ್ರಯಾಣಿಸುವವರ ಮೇಲೆ ಪರಿಣಾಮ ಬೀರುವಂತಾಗಬಾರದು' ಎಂದೂ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ರುಬಿಯೊ, 'ಅಮೆರಿಕ ವಲಸೆ ವ್ಯವಸ್ಥೆಯನ್ನು ಸುಧಾರಿಸಲು ಪ್ರಯತ್ನಿಸುತ್ತಿದೆ. ಈ ಪ್ರಕ್ರಿಯೆಯಲ್ಲಿ ಕೆಲ ಸಮಸ್ಯೆಗಳು ಕಂಡುಬರಬಹುದು. ಅಂತಿಮವಾಗಿ ಪ್ರತಿಯೊಬ್ಬ ಭಾಗೀದಾರಗೆ ಅನುಕೂಲವಾಗುವಂತಹ ನಿಯಮಗಳನ್ನು ರೂಪಿಸಲಾಗುವುದು' ಎಂದು ಹೇಳಿದರು.

'ಗ್ರೀನ್ ಕಾರ್ಡ್ ಬಯಸುವವರು ತಮ್ಮ ತಾಯ್ನಾಡಿನಿಂದಲೇ ಅರ್ಜಿ ಸಲ್ಲಿಸಬೇಕು' ಎಂಬ ನೀತಿಯನ್ನು ಅಮೆರಿಕ ಘೋಷಿಸಿದೆ. ಇದು 12 ಲಕ್ಷ ಭಾರತೀಯ ಅಮೆರಿಕನ್ನರು ಹಾಗೂ ಅವರ ಕುಟುಂಬಗಳನ್ನು ಅನಿಶ್ಚಿತತೆಗೆ ದೂಡುತ್ತದೆ' ಎಂಬ ಕಳವಳ ವ್ಯಕ್ತವಾಗಿದೆ.

Publication Date
25/05/2026

Presented by ಪ್ರಜಾವಾಣಿ

Dr. Rajkumar IAS

# ಮೇಕೆದಾಟು: ತಮಿಳುನಾಡು ಅರ್ಜಿ ವಜಾ

## ತೀರ್ಪಿನ ಪುನರ್ ಪರಿಶೀಲನೆ ಅಗತ್ಯ ಇಲ್ಲ: ಸುಪ್ರೀಂ ಕೋರ್ಟ್ ಪೀಠ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದ ಪ್ರಸ್ತಾವಿತ ಮೇಕೆದಾಟು ಯೋಜನೆ ವಿರುದ್ಧದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿದ 2025ರ ನವೆಂಬರ್ ತೀರ್ಪನ್ನು ಮರು-ಪರಿಶೀಲಿಸಬೇಕು ಎಂದು ಕೋರಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ತೆರೆದ ನ್ಯಾಯಾಲಯದಲ್ಲಿ ವಿಚಾರಣೆಗೆ ಕೋರಿ ತಮಿಳುನಾಡು ಸಲ್ಲಿಸಿದ್ದ ಈ ಅರ್ಜಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ತಿರಸ್ಕರಿಸಿತು.

ವಕೀಲರ ಮೌಖಿಕ ವಾದಗಳಿಲ್ಲದೆ ದಾಖಲೆಗಳ ಮೂಲಕ ನ್ಯಾಯಮೂರ್ತಿಗಳ ಕೊಠಡಿಗಳಲ್ಲಿ ಪರಿಶೀಲನಾ ಅರ್ಜಿಯ ವಿಚಾರಣೆ ನಡೆಸಲಾಗುತ್ತದೆ.

'ಮರು ಪರಿಶೀಲನಾ ಅರ್ಜಿಯ ವಿಷಯಗಳು ಮತ್ತು ಅದರೊಂದಿಗೆ ಲಗತ್ತಿಸಲಾದ ದಾಖಲೆಗಳನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ತೀರ್ಪಿನ ಪುನರ್ ಪರಿಶೀಲನೆ ಅಗತ್ಯ ಇಲ್ಲ' ಎಂದು ಪೀಠವು ಇತ್ತೀಚೆಗೆ ಬಿಡುಗಡೆ ಮಾಡಿದ ತನ್ನ ಆದೇಶದಲ್ಲಿ ತಿಳಿಸಿದೆ.

**ಮುಖ್ಯಾಂಶಗಳು**

- 2025ರ ನವೆಂಬರ್ ತೀರ್ಪಿನ ಮರು ಪರಿಶೀಲನೆಯ ಅರ್ಜಿ
- ತೆರೆದ ನ್ಯಾಯಾಲಯದಲ್ಲಿ ವಿಚಾರಣೆಗೆ ಕೋರಿದ್ದ ತಮಿಳುನಾಡು

ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ 2025ರ ನವೆಂಬರ್‌ನಲ್ಲಿ ವಜಾಗೊಳಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಹಾಗೂ ಎನ್.ವಿ. ಅಂಜಾರಿಯಾ ಪೀಠವು, 'ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮಾತ್ರ ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆಗಳನ್ನು ತಜ್ಞರು ಪರಿಶೀಲಿಸಿದ ಬಳಿಕವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಇದನ್ನು ಪ್ರಶ್ನಿಸಿ ತಮಿಳುನಾಡು ಅರ್ಜಿ ಸಲ್ಲಿಸಿರುವುದು ಅವಧಿಪೂರ್ವ' ಎಂದು ಅಭಿಪ್ರಾಯಪಟ್ಟಿತ್ತು.

'ತಮಿಳುನಾಡಿನ ಆಕ್ಷೇಪಣೆಗಳನ್ನು ಹಾಗೂ ತಜ್ಞ ಸಂಸ್ಥೆಗಳು, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಮತ್ತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಗಳ (ಸಿಡಬ್ಲ್ಯುಎಂಎ) ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ ಆಯೋಗವು ಯೋಜನೆಗೆ ಅನುಮೋದನೆ ನೀಡಲಿದೆ' ಎಂದು ಪೀಠ ತಿಳಿಸಿತ್ತು.

'ನ್ಯಾಯಾಲಯ ಮತ್ತು ಪ್ರಾಧಿಕಾರಗಳ ನಿರ್ದೇಶನಗಳನ್ನು ಅನುಸರಿಸಿ ಕರ್ನಾಟಕ ರಾಜ್ಯವು ಕಾವೇರಿ ನೀರನ್ನು ಹರಿಸಲು ಬದ್ಧವಾಗಿರಬೇಕು. ಒಂದು ವೇಳೆ, ಈ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಕರ್ನಾಟಕ ವಿಫಲವಾದರೆ, ನ್ಯಾಯಾಂಗ ನಿಂದನೆ ಎಸಗಿದ ಅಪಾಯ ಎದುರಿಸಲಿದೆ' ಎಂದು ಪೀಠ ಎಚ್ಚರಿಸಿತ್ತು. ಆದಾಗ್ಯೂ, 'ನ್ಯಾಯಾಲಯದ ಎಲ್ಲ ನಿರ್ದೇಶನಗಳನ್ನು ಪಾಲಿಸಲಾಗಿದೆ. ತಮಿಳುನಾಡು ಎತ್ತಿರುವ ಅನೇಕ ಪ್ರಶ್ನೆಗಳು ಅತಿಯಾದುದು' ಎಂದು ಕರ್ನಾಟಕ ವಾದಿಸಿತ್ತು.

Publication Date
26/05/2026

## ಕಾನೂನು ಕ್ರಮ ಚುರುಕುಗೊಳಿಸಿ: ಅಧಿಕಾರಿಗಳಿಗೆ ವಿಜಯ್ ಸೂಚನೆ

**ಚೆನ್ನೈ (ಪಿಟಿಐ):** ಮೇಕೆದಾಟು-ವಿನಲ್ಲಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಿಸುವ ಕರ್ನಾಟಕದ ಪ್ರಸ್ತಾವದ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಸೋಮವಾರ ಪರಿಶೀಲನಾ ಸಭೆ ನಡೆಸಿದರು.

ಮೇಕೆದಾಟುವಿನಲ್ಲಿ ಅಣೆಕಟ್ಟು ಕಟ್ಟುವ ಕರ್ನಾಟಕದ ಯೋಜನೆಗೆ ತಮಿಳುನಾಡು ಸರ್ಕಾರ ಆರಂಭದಿಂದಲೂ ವಿರೋಧ ವ್ಯಕ್ತಪಡಿಸುತ್ತಿದೆ.

ಕರ್ನಾಟಕ ಸರ್ಕಾರವು ಯೋಜನೆಗೆ ಭೂಮಿ ಪೂಜೆ ನೆರವೇರಿಸಲಿದೆ ಎಂಬ ಕಾರಣಕ್ಕೆ ಈ ಸಭೆ ನಡೆದಿದೆ ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡಿನ ಹಕ್ಕು ರಕ್ಷಿಸಲು ಹಾಗೂ ರೈತರ ಹಿತಾಸಕ್ತಿ ಕಾಪಾಡಲು ವಿವರವಾದ ಪರಿಶೀಲನಾ ಸಭೆ ನಡೆಸಲಾಯಿತು ಎಂದು ತಿಳಿಸಿದೆ.



ಸಿ. ಜೋಸೆಫ್ ವಿಜಯ್

'ಕೋರ್ಟ್ ತೀರ್ಪನ್ನು ಗಮನದಲ್ಲಿ ಇಟ್ಟುಕೊಂಡು ವಿವರವಾದ ಸಮಾಲೋಚನೆಗಳನ್ನು ನಡೆಸಿದ ನಂತರ ಕಾನೂನು ಕ್ರಮಗಳನ್ನು ಚುರುಕುಗೊಳಿಸಲು ಮುಖ್ಯಮಂತ್ರಿ ನಿರ್ದೇಶಿಸಿದರು' ಎಂದು ಪ್ರಕಟಣೆ ತಿಳಿಸಿದೆ.

ಕುಡಿಯುವ ನೀರಿನ ಅವಶ್ಯಕತೆ ಹಾಗೂ ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಸಮತೋಲನ ಜಲಾಶಯ ನಿರ್ಮಿಸಲು ಕರ್ನಾಟಕ ಯೋಜಿಸಿದೆ.

ಅಡ್ವೊಕೇಟ್ ಜನರಲ್ ವಿಜಯ್ ನಾರಾಯಣ್, ಸಚಿವರಾದ ಎನ್. ಆನಂದ್, ಆಧವ್ ಅರ್ಜುನ, ಆರ್. ನಿರ್ಮಲಕುಮಾರ್ ಸಭೆಯಲ್ಲಿ ಇದ್ದರು.

Presented by ಪ್ರಜಾವಾಣಿ

Dr. Rajkumar IAS

# ಲಕ್ಕುಂಡಿ: 13 ಸಾಲುಗಳ ಶಾಸನ ಪತ್ತೆ

ಗದಗ: ತಾಲ್ಲೂಕಿನ ಐತಿಹಾಸಿಕ ಲಕ್ಕುಂಡಿ ಗ್ರಾಮದ ಕಟ್ಟಿಹಳ್ಳದಲ್ಲಿ ಸೋಮವಾರ ಚಾಲುಕ್ಯರ ರಾಜ ಎರಡನೇ ಜಗದೇಕಮಲ್ಲನ ಆಳ್ವಿಕೆ ಅವಧಿಯ 13 ಸಾಲುಗಳುಳ್ಳ ಶಾಸನ ಪತ್ತೆಯಾಗಿದೆ.

ಪ್ರಾಚ್ಯ ಅವಶೇಷಗಳ ಅನ್ವೇಷಣೆ ವೇಳೆ ಇಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರುವ ಬಟ್ಟೂರು ಮತ್ತು ಕವಲೂರ ಅವರಿಗೆ ಸೇರಿದ ಜಮೀನಿನ ಹತ್ತಿರದ ಕಟ್ಟಿಹಳ್ಳದ ಪಕ್ಕದಲ್ಲಿ ಈ ಶಾಸನ ಪತ್ತೆಯಾಗಿದೆ.

'ಶಾಸನದ ಆರಂಭದಲ್ಲಿ ಶಿವಸ್ತುತಿ ಇದೆ. ಇದು ಶಿವಾಲಯಕ್ಕೆ ಭೂದಾನ ಕೊಟ್ಟ ಶಾಸನವಾಗಿರಬಹುದು. ಶಾಸನದ ಸ್ಪಷ್ಟವಾದ ಕಾಲ ಲಭ್ಯವಿಲ್ಲ.



ಜಗದೇಕಮಲ್ಲನ ಆಳ್ವಿಕೆಯ ಕಾಲ ಕ್ರಿಶ 1139-1149. ಜಗದೇಕ ಮಲ್ಲನ 10 ವರ್ಷದ ಆಡಳಿತದ ಅವಧಿಯಲ್ಲಿ ಈ ಶಾಸನ ರಚನೆ ಆಗಿರಬಹುದು. ಲಿಪಿದೃಷ್ಟಿಯಿಂದ ಶಾಸನದ ಕಾಲವನ್ನು 12ನೇ ಶತಮಾನದ ರಚನೆ ಎಂದೂ ಹೇಳಬಹುದು' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.







ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕನ್ನಡಿಗರಾದ ಎಂ.ಅಂಕೇಗೌಡ, ಎಸ್‌ಜಿ. ಸುಶೀಲಮ್ಮ ಅವರಿಗೆ ಪದ್ಮಶ್ರೀ, ಶತಾವಧಾನಿ ಡಾ.ಆರ್‌ಗಣೇಶ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಿದರು

Publication Date
26/05/2026

Presented by

# ವಿವಿಧ ಸಾಧಕರಿಗೆ ಪದ್ಮ ಪ್ರಶಸ್ತಿ ಪ್ರದಾನ



ಪದ್ಮ ಪ್ರಶಸ್ತಿ ಸ್ವೀಕಾರಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉದ್ದಂಡವಾಗಿ ನಮಸ್ಕರಿಸಿದ ಪುದುಚೆರಿಯ ಸಿಲಂಬಮ್ ತರಬೇತುದಾರ ಕೆ.ಪಜನಿವೆಲ್

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ಪದ್ಮ ಪ್ರಶಸ್ತಿ ಪ್ರದಾನ ಮಾಡಿದರು. ಬಾಲಿವುಡ್ ನಟ, ದಿವಂಗತ ಧರ್ಮೇಂದ್ರ ಪರವಾಗಿ ನಟಿ, ಅವರ ಪತ್ನಿ ಹೇಮಾ ಮಾಲಿನಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಿದರು.

ಇದೇ ವೇಳೆ, ಶಾಸ್ತ್ರೀಯ ಸಂಗೀತಗಾರ, ವಯೋಲಿನ್ ವಾದಕ ಎನ್.ರಾಜಂ, ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಭಗತ್ ಸಿಂಗ್ ಕೋಶಿಯಾರಿ, ಕನ್ನಡಿಗ ಶತಾವಧಾನಿ ಆರ್.ಗಣೇಶ್, ಕೋಟಕ್ ಮಹೀಂದ್ರ ಬ್ಯಾಂಕ್‌ನ ಸಂಸ್ಥಾಪಕ ಉದಯ್ ಸುರೇಶ್ ಕುಮಾರ್ ಕೋಟಕ್, ಜಠರಕರುಳಿನ ತಜ್ಞ ಕಲ್ಲಿಪಟ್ಟಿ ರಾಮಸ್ವಾಮಿ ಪಳನಿಸ್ವಾಮಿ ಅವರಿಗೂ ಪದ್ಮಭೂಷಣ ಪ್ರದಾನ ಮಾಡಿದರು.

ಮರಣೋತ್ತರವಾಗಿ ಜಾಹೀರಾತು ದಿಗ್ಗಜ ಪೀಯೂಷ್ ಪಾಂಡೆ ಪರವಾಗಿ ಪತ್ನಿ, ಮಾಜಿ ಸಂಸದ ವಿಜಯ್ ಕುಮಾರ್ ಮಲ್ಹೋತ್ರಾ ಅವರ ಮಗ ಪ್ರಶಸ್ತಿ ಸ್ವೀಕರಿಸಿದರು.

ವಿದ್ವಾಂಸ ಶತಾವಧಾನಿ ಡಾ.ಆರ್. ಗಣೇಶ್ ಅವರಿಗೆ ಪದ್ಮಭೂಷಣ, ಮಂಡ್ಯದ ಅಂಕೇಗೌಡ ಜ್ಞಾನ ಪ್ರತಿಷ್ಠಾನ ಪುಸ್ತಕ ಮನೆಯ ವ್ಯವಸ್ಥಾಪಕ ಟ್ರಸ್ಟಿ ಎಂ.ಅಂಕೇಗೌಡ, ಸಾಮಾಜಿಕ ಕಾರ್ಯಕರ್ತೆ ಎಸ್.ಜಿ. ಸುಶೀಲಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ವಂದೇಮಾತರಂ' ಗೀತೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡು, ನಂತರ ರಾಷ್ಟ್ರಗೀತೆ ಜನಗಣಮನ ನುಡಿಸಲಾಯಿತು. ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

2026ನೇ ಸಾಲಿನಲ್ಲಿ 131 ಮಂದಿ ಸಾಧಕರಿಗೆ ಪದ್ಮ ಪ್ರಶಸ್ತಿ ನೀಡಲು ದ್ರೌಪದಿ ಮುರ್ಮು ಅವರು ಅನುಮೋದನೆ ನೀಡಿದ್ದರು. ಇದರಲ್ಲಿ 5 ಮಂದಿಗೆ ಪದ್ಮವಿಭೂಷಣ, 13 ಮಂದಿಗೆ ಪದ್ಮ ಭೂಷಣ, 113 ಮಂದಿಗೆ ಪದ್ಮಶ್ರೀ ನೀಡಲಾಗುತ್ತದೆ. ಎರಡು ಸಲ ನಡೆಯುವ ಪ್ರತ್ಯೇಕ ಕಾರ್ಯಕ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

Publication Date
26/05/2026

Presented by ಪ್ರಜಾವಾಣಿ

Dr. Rajkumar

# ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೇಷ್ಯಾ ನೀಡುವ ಅಂತರರಾಷ್ಟ್ರೀಯ ಮಟ್ಟದ ಗೋಲ್ಡನ್ ಗ್ಲೋಬ್ ಟೈಗರ್ಸ್ ಅವಾರ್ಡ್ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನೀಡುವ ಫೈನಾನ್ಶಿಯಲ್ ಎಕ್ಸ್‌ಪ್ರೆಸ್ ಮೊಬಿಲಿಟಿ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದೆ.

ನಿಗಮದಲ್ಲಿ ನೌಕರರಿಗೆ ಪರಿಣಾಮಕಾರಿ ತರಬೇತಿ ಹಾಗೂ ಪಾರದರ್ಶಕ ನೇಮಕಾತಿ ಪ್ರಕ್ರಿಯೆಗಾಗಿ ಅವಾರ್ಡ್ ಫಾರ್ ಎಕ್ಸಲೆನ್ಸ್ ಇನ್ ಟ್ರೈನಿಂಗ್ ವಿಭಾಗದಲ್ಲಿ ಅಂತರ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಎಕ್ಸಲೆನ್ಸ್ ಇನ್ ಪಬ್ಲಿಕ್ ಟ್ರಾನ್ಸ್‌ಪೋರ್ಟೇಶನ್ ವರ್ಗದಲ್ಲಿ ಧ್ವನಿಸ್ಪಂದನ ಉಪಕ್ರಮಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಮಲೇಷ್ಯಾದ ಕ್ವಾಲಾಲಂಪುರ ನಗರದಲ್ಲಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು, ನವದೆಹಲಿಯ ದಿ ಲಲಿತ್ ಹೋಟೆಲ್‌ನಲ್ಲಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

# ಲ್ಯಾಟಿನ್ ಅಮೆರಿಕ, ಆಫ್ರಿಕಾದಿಂದ ಭಾರತ ಕಚ್ಚಾ ತೈಲ ಆಮದು

ನವದೆಹಲಿ: ಪಶ್ಚಿಮ ಏಷ್ಯಾದ ಸಂಘರ್ಷದಿಂದ ಹೊರ್ಮುಜ್ ಜಲಸಂಧಿಯಲ್ಲಿ ಸರಕುಗಳ ಸಾಗಣೆಗೆ ಉಂಟಾದ ನಿರ್ಬಂಧದಿಂದ ದೇಶದ ತೈಲ ಸಂಸ್ಕರಣಾ ಕಂಪನಿಗಳು ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು ಮುಂದಾಗಿವೆ.

ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ದೇಶದ ತೈಲ ಸಂಸ್ಕರಣಾ ಕಂಪನಿಗಳು ತೈಲ ಕೊರತೆಯನ್ನು ಸರಿದೂಗಿಸಲು, ವೆನೆಜುವೆಲಾ, ಬ್ರೆಜಿಲ್, ಅಂಗೋಲಾ ಮತ್ತು ನೈಜೀರೀಯಾದಿಂದ ತೈಲ ಆಮದನ್ನು ಹೆಚ್ಚಳ ಮಾಡಿವೆ. ಜೊತೆಗೆ ರಷ್ಯಾದಿಂದ ತೈಲ ಖರೀದಿಯನ್ನು ಮುಂದುವರಿಸಿವೆ ಎಂದು ಕೆಪ್ಲರ್ ದತ್ತಾಂಶ ತಿಳಿಸಿದೆ.

ಮೇ ತಿಂಗಳಿನಲ್ಲಿ ರಷ್ಯಾದಿಂದ ಪ್ರತಿ ದಿನ 19 ಲಕ್ಷ ಬ್ಯಾರಲ್ ಮತ್ತು ಇರಾಕ್‌ನಿಂದ 41 ಸಾವಿರ ಬ್ಯಾರಲ್ ಕಚ್ಚಾ ತೈಲ ಪಡೆಯಲಿದೆ. ಏಪ್ರಿಲ್‌ನಲ್ಲಿ ದಿನಕ್ಕೆ 45.7 ಲಕ್ಷ ಬ್ಯಾರಲ್ ತೈಲವನ್ನು ಆಮದು ಮಾಡಿಕೊಳ್ಳಲಾಗಿತ್ತು.

ಯುಎಇನಿಂದ ಮಾರ್ಚ್‌ನಲ್ಲಿ ಪ್ರತಿ ದಿನ 2.30 ಲಕ್ಷ ಬ್ಯಾರಲ್ ಅನ್ನು ಆಮದು ಮಾಡಿಕೊಳ್ಳಲಾಗಿತ್ತು. ಇದು ಏಪ್ರಿಲ್‌ನಲ್ಲಿ 6.69 ಲಕ್ಷ ಬ್ಯಾರಲ್‌ಗೆ ಏರಿಕೆಯಾಗಿದೆ. ಒಪೆಕ್ ರಾಷ್ಟ್ರಗಳಿಂದ ಆಮದು ಶೇ 30ರಿಂದ ಶೇ 45ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ. ಭಾರತಕ್ಕೆ ಕಚ್ಚಾ ತೈಲ ಪೂರೈಸುವಲ್ಲಿ ರಷ್ಯಾ ಅಗ್ರಸ್ಥಾನದಲ್ಲಿ ಮುಂದುವರೆದಿದ್ದು, ಯುಎಇ ಮತ್ತು ಸೌದಿ ಅರೇಬಿಯಾ ನಂತರದ ಸ್ಥಾನದಲ್ಲಿವೆ. ಬ್ರೆಜಿಲ್ ನಾಲ್ಕನೇ ಅತಿದೊಡ್ಡ ಪೂರೈಕೆದಾರರಾಗಿದ್ದರೆ, ವೆನೆಜುವೆಲಾ ಐದನೇ ಸ್ಥಾನದಲ್ಲಿದೆ.



### ಮುಟ್ಟುಗೋಲು ಹಾಕಿಕೊಂಡಿರುವ ₹1.14 ಲಕ್ಷ ಕೋಟಿಗೆ ಇರಾನ್ ಒತ್ತಾಯ

# ‘ನಮ್ಮ ಹಣ ಬಿಡುಗಡೆ ಮಾಡಿ’

ಟೆಹರಾನ್, ನವದೆಹಲಿ (ಎಎಫ್‌ಪಿ/ಪಿಟಿಐ): ‘ಯುದ್ಧ ಅಂತ್ಯಗೊಳಿಸಲು ಅಮೆರಿಕದೊಂದಿಗೆ ಮಾತುಕತೆ ಮುಂದುವರಿಯಬೇಕು ಎಂದಾದರೆ, ಕತಾರ್‌ನಲ್ಲಿ ಇರಿಸಲಾಗಿರುವ ಮುಟ್ಟುಗೋಲು ಹಾಕಿಕೊಂಡಿರುವ ನಮ್ಮ 12 ಬಿಲಿಯನ್ ಡಾಲರ್ (ಸುಮಾರು ₹1.14 ಲಕ್ಷ ಕೋಟಿ) ಅನ್ನು ತಕ್ಷಣವೇ ಬಿಡುಗಡೆ ಮಾಡಬೇಕು’ ಎಂದು ಇರಾನ್ ಹೇಳಿದೆ.

ಇರಾನ್‌ನ ತಸ್ನಿಮ್ ಸುದ್ದಿ ಸಂಸ್ಥೆ ಈ ಬಗ್ಗೆ ವರದಿ ಮಾಡಿದೆ. ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್, ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಇರಾನ್‌ನ ಕೇಂದ್ರೀಯ ಬ್ಯಾಂಕ್‌ನ ಗವರ್ನರ್ ಸೇರಿದ ನಿಯೋಗವು ಸೋಮವಾರ ದೋಹಾ ತಲುಪಿದೆ.

‘ಮಾತುಕತೆ ಆರಂಭಿಸಲು ಇದು ಮೊದಲ ಹಂತವಾಗಲಿದೆ. ಹಣ ಬಿಡುಗಡೆಯಾಗುವುದು ಮಾತ್ರವಲ್ಲ, ಆ ಹಣವು ನಮಗೆ ತಲುಪಬೇಕು. ಹಣ ಬಿಡುಗಡೆ ಮಾತ್ರವೇ ಒಪ್ಪಂದಕ್ಕೆ ಬರಲು ನಾವು ಮುಂದಿಡುತ್ತಿರುವ ಷರತ್ತು ಅಲ್ಲ. ಇದೊಂದು ಭಾಗವಷ್ಟೆ ಎಂದು ಇರಾನ್ ಮೂಲಗಳು ಹೇಳಿವೆ’ ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಮುಟ್ಟುಗೋಲು ಹಾಕಿಕೊಂಡಿರುವ ಇರಾನ್‌ನ ಹಣ ಬಿಡುಗಡೆ ಮತ್ತು ಇರಾನ್‌ನ ಬಂದರುಗಳಿಗೆ ಹಾಕಿರುವ ದಿಗ್ಬಂಧನವನ್ನು ತೆರವು ಮಾಡಲಾಗುವುದು. ಇದಕ್ಕೆ ಪ್ರತಿಯಾಗಿ ಹೊರ್ಮುಜ್ ಜಲಸಂಧಿಗೆ ಇರಾನ್ ವಿಧಿಸಿರುವ ದಿಗ್ಬಂಧನವನ್ನು ತೆರವು ಮಾಡಬೇಕು ಎಂದು ಅಮೆರಿಕ ಹೇಳಿದೆ’ ಎಂದು ‘ಫಾರ್ಸ್’ ಸುದ್ದಿ ಸಂಸ್ಥೆ ವರದಿ ಮಾಡಿದೆ.

> **ಒಂದೋ ಉತ್ತಮ ಒಪ್ಪಂದಕ್ಕೆ ಬರುತ್ತೇವೆ ಇಲ್ಲವೇ ಬೇರೆ ಮಾರ್ಗದ ಮೂಲಕ ಒಪ್ಪಂದಕ್ಕೆ ಬರುತ್ತೇವೆ. ನಾವು ಉತ್ತಮ ಒಪ್ಪಂದ ಆಗಲಿ ಎಂದು ಬಯಸುತ್ತೇವೆ**
>
> **ಮಾರ್ಕೊ ರುಬಿಯೊ,** ಅಮೆರಿಕದ ವಿದೇಶಾಂಗ ಕಾರ್ಯದರ್ಶಿ

## ‘ಅಬ್ರಹಾಂ ಒಪ್ಪಂದಕ್ಕೆ ಇರಾನ್‌ನಿಂದ ಸಹಿ ಹಾಕಿಸಿ’

‘ಪಶ್ಚಿಮ ಏಷ್ಯಾದಲ್ಲಿನ ಎಲ್ಲ ಮುಸ್ಲಿಂ ದೇಶಗಳು ಸೇರಿ ಇತರೆ ಮುಸ್ಲಿಂ ದೇಶಗಳು ಇಸ್ರೇಲ್‌ನೊಂದಿಗೆ ಉತ್ತಮ ಬಾಂಧವ್ಯ ಹೊಂದಬೇಕು’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗ್ರಹಿಸಿದ್ದಾರೆ. ‘ಇದು ಇರಾನ್‌ನೊಂದಿಗಿನ ಶಾಂತಿ ಒಪ್ಪಂದದ ಭಾಗ’ ಎಂದೂ ಹೇಳಿದ್ದಾರೆ.

‘ಅಬ್ರಹಾಂ ಒಪ್ಪಂದ’ಕ್ಕೆ ಕಡ್ಡಾಯವಾಗಿ ಸಹಿ ಹಾಕುವಂತೆ ಸೌದಿ ಅರೇಬಿಯಾ, ಕತಾರ್, ಪಾಕಿಸ್ತಾನ, ಟರ್ಕಿ, ಈಜಿಪ್ಟ್, ಜೋರ್ಡನ್ ದೇಶಗಳಿಗೆ ಟ್ರಂಪ್ ಸೂಚನೆ ನೀಡಿದ್ದಾರೆ. ಈ ದೇಶಗಳೊಂದಿಗೆ ಶನಿವಾರ ಮಾತುಕತೆ ನಡೆಸಿದ್ದಾಗಿ ಟ್ರಂಪ್ ಅವರು ಪೋಸ್ಟ್ ಹಂಚಿಕೊಂಡಿದ್ದಾರೆ.

‘ಸೌದಿ ಅರೇಬಿಯಾ ಮತ್ತು ಕತಾರ್ ತಕ್ಷಣದಲ್ಲಿಯೇ ಸಹಿ ಹಾಕಬೇಕು. ಇತರೆ ದೇಶಗಳು ಇವುಗಳನ್ನು ಹಿಂಬಾಲಿಸಲಿವೆ. ಸಹಿ ಹಾಕಲಿಲ್ಲ ಎಂದಾದರೆ, ಇದು ಅವುಗಳ ಕೆಟ್ಟ ಉದ್ದೇಶವನ್ನು ತೋರಿಸುತ್ತದೆ. ಈ ಒಪ್ಪಂದಕ್ಕೆ ಸಹಿ ಹಾಕಲು ಇರಾನ್‌ಗೆ ಯಾವ ದೇಶ ಮನವೊಲಿಸುತ್ತದೆಯೊ ಆ ದೇಶವನ್ನು ಗೌರವಿಸಲಾಗುವುದು’ ಎಂದು ಬರೆದುಕೊಂಡಿದ್ದಾರೆ.

## ಏನಿದು ಅಬ್ರಹಾಂ ಒಪ್ಪಂದ?

ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವಂತೆ ಮಾಡಲು 2020ರಲ್ಲಿ ಡೊನಾಲ್ಡ್ ಟ್ರಂಪ್ ಅವರು ‘ಅಬ್ರಹಾಂ ಒಪ್ಪಂದ’ವನ್ನು ರಚಿಸಿದ್ದರು. ಯುಎಇ, ಬಹರೇನ್, ಸುಡಾನ್, ಮೊರಕ್ಕೊ ಮತ್ತು ಕಜಾಕಸ್ತಾನವು ಇಸ್ರೇಲ್‌ನೊಂದಿಗೆ ಈ ಒಪ್ಪಂದ ಮಾಡಿಕೊಂಡಿವೆ.

ಧಾರ್ಮಿಕ, ಸಾಂಸ್ಕೃತಿಕವಾಗಿ ಪಶ್ಚಿಮ ಏಷ್ಯಾದಲ್ಲಿನ ದೇಶಗಳು ಭಿನ್ನವಾಗಿದೆ. ಇದರಿಂದಾಗಿ ಈ ದೇಶಗಳ ಮಧ್ಯೆ ಸಂಘರ್ಷ, ವೈರತ್ವ ಇದೆ. ಇದನ್ನು ಕೊನೆಗಾಣಿಸಿ ರಾಜತಾಂತ್ರಿಕ ಸಂಬಂಧ ವೃದ್ಧಿಯಾಗಿಸಲು ಟ್ರಂಪ್ ಅವರು ಒಪ್ಪಂದ ರಚಿಸಿದ್ದರು.

ಅಬ್ರಹಾಂ ಅವರನ್ನು ಜುಡಾಯಿಸಂ, ಇಸ್ಲಾಂ ಮತ್ತು ಕ್ರೈಸ್ತ ಧರ್ಮದವರು ತಮ್ಮ ಧರ್ಮಗುರು/ಪ್ರವಾದಿ ಎಂದು ನಂಬಿದ್ದಾರೆ. ಈ ಕಾರಣದಿಂದ ಈ ಒಪ್ಪಂದಕ್ಕೆ ‘ಅಬ್ರಹಾಂ ಒಪ್ಪಂದ’ ಎಂದು ಹೆಸರಿಡಲಾಗಿದೆ.

Publication Date
26/05/2026

Presented by

## ಕೌರ್‌ಗೆ ಪದ್ಮ ಗೌರವ

ಪಿಟಿಐ ಚಿತ್ರ:



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿಶ್ವಕಪ್ ವಿಜೇತ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಸೋಮವಾರ ಪ್ರದಾನ ಮಾಡಿದರು

Publication Date
26/05/2026

Presented by

## ಇಂಧನ ಸುರಕ್ಷತೆ: 'ಕ್ವಾಡ್' ಚೌಕಟ್ಟು

ನವದೆಹಲಿ(ಪಿಟಿಐ): ಭವಿಷ್ಯದಲ್ಲಿ ಇಂಧನ ಪೂರೈಕೆಯಲ್ಲಿ ಆಗಬಹುದಾದ ಅಡಚಣೆಗಳನ್ನು ತಪ್ಪಿಸುವ ಸಲುವಾಗಿ ಮಹತ್ವದ ಹೆಜ್ಜೆ ಇಟ್ಟಿರುವ 'ಕ್ವಾಡ್', ಈ ಸಂಬಂಧ ಹಿಂದೂ ಮಹಾಸಾಗರ-ಪೆಸಿಫಿಕ್ ಇಂಧನ ಸುರಕ್ಷತೆ ಚೌಕಟ್ಟನ್ನು ಮಂಗಳವಾರ ಘೋಷಿಸಿದೆ.

ತೈಲ ಸಂಗ್ರಹ ಹೆಚ್ಚಿಸುವುದು, ಸುಲಲಿತವಾಗಿ ಇಂಧನ ಪೂರೈಕೆ ಖಾತ್ರಿಪಡಿಸಲು ನೀತಿಗಳನ್ನು ರೂಪಿಸುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಸ್ಪಂದನೆಗಾಗಿ ಸದಸ್ಯ ರಾಷ್ಟ್ರಗಳ ನಡುವೆ ಸಮನ್ವಯ ಸಾಧಿಸುವುದಕ್ಕಾಗಿ ವಿಧಾನ ರೂಪಿಸುವಂತಹ ಕ್ರಮಗಳನ್ನು ಈ ಚೌಕಟ್ಟು ಒಳಗೊಂಡಿದೆ.

ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ದಾಳಿ ಆರಂಭಿಸಿದ ಬಳಿಕ, ತೈಲ ಹೊತ್ತ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಸಾಗುವುದಕ್ಕೆ ತೊಂದರೆಯಾಗುತ್ತಿದೆ. ಇದರಿಂದ ವಿಶ್ವದಾದ್ಯಂತ ಇಂಧನ ಬಿಕ್ಕಟ್ಟು ಕಾಣಿಸಿಕೊಂಡಿದೆ. ಜಗತ್ತಿನ ಐದನೇ ಒಂದರಷ್ಟು ತೈಲ ಹಾಗೂ ಎಲ್‌ಎನ್‌ಜಿ ಈ ಜಲಮಾರ್ಗದ ಮೂಲಕವೇ ಸಾಗಣೆಯಾಗುತ್ತದೆ. ಈ ಕಾರಣಕ್ಕೆ ಇಂಧನ ಸುರಕ್ಷತೆ ಕುರಿತ ಚೌಕಟ್ಟಿಗೆ ಮಹತ್ವ ಬಂದಿದೆ. ▶10

### ಸಚಿವ ಜೈಶಂಕರ್ ಅಧ್ಯಕ್ಷತೆಯಲ್ಲಿ ವಿದೇಶಾಂಗ ಸಚಿವರ ಸಭೆ • ಕಾರ್ಯತಂತ್ರ ಕುರಿತು ಚರ್ಚೆ

# ಚೀನಾ ಪ್ರಾಬಲ್ಯ ತಡೆಗೆ 'ಕ್ವಾಡ್' ಪ್ರತಿತಂತ್ರ

ನವದೆಹಲಿ(ಪಿಟಿಐ): ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ತನ್ನ ಮಿಲಿಟರಿ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿರುವ ಚೀನಾದ ಪ್ರಯತ್ನಗಳಿಗೆ ಪ್ರತಿಯಾಗಿ ಕಾರ್ಯತಂತ್ರ ಹೆಣೆಯುವುದಕ್ಕೆ ಸಂಬಂಧಿಸಿ 'ಕ್ವಾಡ್' ಗುಂಪು ಮಂಗಳವಾರ ಹಲವಾರು ಕ್ರಮಗಳನ್ನು ಘೋಷಿಸಿದೆ.

'ಪೂರ್ವ ಚೀನಾ ಸಮುದ್ರ ಮತ್ತು ದಕ್ಷಿಣ ಚೀನಾ ಸಮುದ್ರದಲ್ಲಿನ ಸನ್ನಿವೇಶ ಕಳವಳಕಾರಿಯಾಗಿದೆ. ಈ ಜಲಪ್ರದೇಶದಲ್ಲಿ ಕೈಗೊಳ್ಳುವ ಏಕಪಕ್ಷೀಯ ಅಥವಾ ಅಸ್ಥಿರತೆ ಉಂಟು ಮಾಡಬಲ್ಲ ಕ್ರಮಗಳಿಗೆ ನಮ್ಮ ವಿರೋಧ ಇದೆ' ಎಂದು ಹೇಳುವ ಮೂಲಕ, 'ಕ್ವಾಡ್' ರಾಷ್ಟ್ರಗಳು ಚೀನಾಕ್ಕೆ ಪರೋಕ್ಷ ಸಂದೇಶ ರವಾನಿಸಿದವು.

ಇಂಧನ ಹಾಗೂ ನಿರ್ಣಾಯಕ ಖನಿಜಗಳ ವಿಚಾರದಲ್ಲಿ 'ಕ್ವಾಡ್' ಸದಸ್ಯ ರಾಷ್ಟ್ರಗಳ ನಡುವೆ ಸಹಕಾರ ವೃದ್ಧಿಸುವುದು, ಹಿಂದೂಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಕಣ್ಗಾವಲು ಹೆಚ್ಚಿಸುವುದು ಹಾಗೂ ಈ ಪ್ರದೇಶದಲ್ಲಿನ ಬಂದರುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುವುದಕ್ಕೆ ಕೂಡ ನಾಲ್ಕು ರಾಷ್ಟ್ರಗಳನ್ನು ಒಳಗೊಂಡ ಈ ಗುಂಪು ನಿರ್ಧರಿಸಿತು.

ಸಚಿವ ಎಸ್.ಜೈಶಂಕರ್ ಅಧ್ಯಕ್ಷತೆಯಲ್ಲಿ ನಡೆದ 'ಕ್ವಾಡ್' ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ, ಹಿಂದೂಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವ ಕುರಿತು ಚರ್ಚಿಸಲಾಯಿತು.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಆಸ್ಟ್ರೇಲಿಯಾ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಹಾಗೂ ಜಪಾನ್ ವಿದೇಶಾಂಗ ಸಚಿವ ತೋಷಿಮಿತ್ಸು ಮೊಟೆಗಿ ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆ ನಂತರ, ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಯಿತು.



ನವದೆಹಲಿಯಲ್ಲಿ ಮಂಗಳವಾರ ನಡೆದ 'ಕ್ವಾಡ್' ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಜಪಾನ್‌ನ ತೋಷಿಮಿತ್ಸು ಮೊಟೆಗಿ, ಆಸ್ಟ್ರೇಲಿಯಾದ ಪೆನ್ನಿ ವಾಂಗ್, ಅಮೆರಿಕದ ಮಾರ್ಕೊ ರುಬಿಯೊ ಮತ್ತು ಎಸ್‌.ಜೈಶಂಕರ್ ತೆರಳುತ್ತಿರುವುದು — ಪಿಟಿಐ ಚಿತ್ರ

### ಪ್ರಮುಖ ಅಂಶಗಳು

- ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ತಡೆರಹಿತ ಸಂಚಾರ ಸಾಧ್ಯವಾಗಬೇಕು
- ಭಯೋತ್ಪಾದನೆ ಕುರಿತು ಶೂನ್ಯ ಸಹಿಷ್ಣುತೆ ಅಗತ್ಯ, ಉಗ್ರರ ದಾಳಿಗೆ ಒಳಗಾಗುವ ರಾಷ್ಟ್ರಗಳು ತಮ್ಮನ್ನು ರಕ್ಷಿಸಿಕೊಳ್ಳುವ ಹಕ್ಕು ಹೊಂದಿವೆ

### ಸದಸ್ಯ ರಾಷ್ಟ್ರಗಳ ಒತ್ತಾಯ

- ತೈಲ ಉತ್ಪಾದಿಸುವ ಮತ್ತು ಖರೀದಿಸುವ ದೇಶಗಳು ಇಡೀ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಬೇಕು
- ಇಂಧನ ಮಾರುಕಟ್ಟೆಯಲ್ಲಿ ಏರಿಳಿತ ಹಾಗೂ ಸಮಸ್ಯೆಗಳು ಕಂಡುಬಂದ ಸಂದರ್ಭಗಳಲ್ಲಿ ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶ ಹಾಗೂ ಜಾಗತಿಕ ಮಟ್ಟದಲ್ಲಿ ಇಂಧನ ಲಭ್ಯತೆಯಲ್ಲಿ ಸ್ಥಿರತೆ ಇರುವುದನ್ನು ಖಾತ್ರಿಪಡಿಸಬೇಕು
- ಸುರಕ್ಷಿತ ಸಮುದ್ರಯಾನ ಖಾತ್ರಿಪಡಿಸಬೇಕು. ನಿರ್ಣಾಯಕ ಜಲಮಾರ್ಗಗಳು ಹಾಗೂ ಮೂಲಸೌಕರ್ಯಗಳಿಗೆ ರಕ್ಷಣೆ ಒದಗಿಸಬೇಕು
- ತಂತ್ರಜ್ಞಾನ, ನಿರ್ವಹಣೆ, ನೀತಿ ನಿರೂಪಣೆ, ಅಂತರರಾಷ್ಟ್ರೀಯ ಮಾರುಕಟ್ಟೆ ವಿಶ್ಲೇಷಣೆ ಹಾಗೂ ತುರ್ತು ಸಂದರ್ಭಗಳಲ್ಲಿ ಸ್ಪಂದಿಸುವ ವ್ಯವಸ್ಥೆಯನ್ನು ಒಳಗೊಂಡ 'ಹಿಂದೂಮಹಾಸಾಗರ-ಪೆಸಿಫಿಕ್ ಇಂಧನ ಸುರಕ್ಷತೆ' ಉಪಕ್ರಮ ಜಾರಿಗೆ ಒತ್ತು

### ಕಣ್ಗಾವಲು: ನಿರ್ಧಾರಕ್ಕೆ ಚೀನಾ ವಿರೋಧ

ಬೀಜಿಂಗ್: 'ಕ್ವಾಡ್ ಗುಂಪು ರಚಿಸುವುದಕ್ಕೆ ಚೀನಾ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸುತ್ತಾ ಬಂದಿದೆ. ಹಲವಾರು ಸಂದರ್ಭಗಳಲ್ಲಿ ತನ್ನ ಈ ನಿಲುವನ್ನು ಹೇಳಿದೆ' ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರರಾದ ಮಾವೊ ನಿಂಗ್ ಮಂಗಳವಾರ ಹೇಳಿದ್ದಾರೆ.

ಹಿಂದೂಮಹಾಸಾಗರ-ಪೆಸಿಫಿಕ್ ಪ್ರದೇಶದ ಸಮುದ್ರ ಮಾರ್ಗಗಳಲ್ಲಿ ಕಣ್ಗಾವಲು ಹೆಚ್ಚಿಸುವುದಕ್ಕೆ ಕ್ವಾಡ್ ವಿದೇಶಾಂಗ ಸಚಿವರ ಸಭೆ ಕೈಗೊಂಡಿರುವ ನಿರ್ಧಾರ ಕುರಿತ ಸುದ್ದಿಗಾರರ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

'ದೇಶಗಳ ನಡುವಿನ ಸಹಕಾರವು ಆಯಾ ಪ್ರದೇಶಗಳಲ್ಲಿ ಶಾಂತಿ, ಸ್ಥಿರತೆ ಸ್ಥಾಪನೆಗೆ ಹಾಗೂ ಪ್ರಗತಿಗೆ ಅನುಕೂಲವಾಗುವಂತಿರಬೇಕೇ ಹೊರತು ಮೂರನೇ ದೇಶವನ್ನು ಗುರಿಯಾಗಿಸಿರಬಾರದು' ಎಂದರು.

# ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಷರತ್ತುಬದ್ಧ ಅನುಮೋದನೆ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸುವ ಪ್ರಸ್ತಾವಕ್ಕೆ ರಾಜ್ಯಪಾಲರು ಮಂಗಳವಾರ ಷರತ್ತುಬದ್ಧ ಅನುಮೋದನೆ ನೀಡಿದ್ದಾರೆ.

ಹಾಲಿ ಪಾಲಿಕೆ ಸದಸ್ಯರ ಅವಧಿ ಐದು ವರ್ಷ ಪೂರ್ಣಗೊಂಡ ನಂತರ ವಿಭಜನೆ ಜಾರಿಯಾಗಬೇಕು. 2026 ಜನವರಿ 1ರಿಂದ 2027 ಮಾರ್ಚ್ 31ರವರೆಗೆ ಆಡಳಿತ ಘಟಕಗಳ ಗಡಿ ಬದಲಾಯಿಸಬಾರದು ಎಂಬ ಜನಗಣತಿ ನಿರ್ದೇಶನಾಲಯದ ಸೂಚನೆಯನ್ನು ಪಾಲಿಸಬೇಕು, ಜನಗಣತಿ ಕಾರ್ಯಾಚರಣೆ ಮುಗಿದ ನಂತರ ಅಧಿಸೂಚನೆ ಅನುಷ್ಠಾನಗೊಳಿಸಬೇಕು ಎಂಬ ನಿಬಂಧನೆ ಹಾಕಿದ್ದಾರೆ.

'ವಿಭಜನೆ ನಂತರದ ಎರಡೂ ಪಾಲಿಕೆಗಳಿಗೆ ಆರ್ಥಿಕ ನೆರವು ಮತ್ತು ಆದಾಯ ಹಂಚಿಕೆಗೆ ರಾಜ್ಯ ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸಲಹೆ ನೀಡಿದ್ದಾರೆ. ಪ್ರಸ್ತಾವವನ್ನು ರಾಜ್ಯ ಸರ್ಕಾರಕ್ಕೆ ಹಿಂತಿರುಗಿಸಿದ್ದಾರೆ.

**ಮುಂದುವರಿದ ಹೋರಾಟ:** ಈ ಮಧ್ಯೆ ಇಲ್ಲಿ ಅನಿರ್ದಿಷ್ಟಾವಧಿ ಧರಣಿ ಮುಂದುವರಿದಿದೆ. ಪ್ರತಿಭಟನಕಾರರು ಬಟ್ಟೆಯ ಮೇಲೆ ರಕ್ತದಲ್ಲಿ, 'ಮಹಾನಗರ ಪಾಲಿಕೆ ಆಗಲೇಬೇಕು' ಎಂದು ಬರೆದು ಪ್ರತಿಭಟನೆ ನಡೆಸಿದರು.

**ಬಿಜೆಪಿ ಬೆಂಬಲ:** ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ವಿಷಯದಲ್ಲಿ ಆಕ್ಷೇಪಿಸಿದ್ದ ಬಿಜೆಪಿಯವರು ಮಂಗಳವಾರ, ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

# ನಿರ್ಣಾಯಕ ಖನಿಜಗಳ ಪೂರೈಕೆ ಒಪ್ಪಂದಕ್ಕೆ ಭಾರತ–ಅಮೆರಿಕ ಸಹಿ

ನವದೆಹಲಿ (ಪಿಟಿಐ): ನಿರ್ಣಾಯಕ ಖನಿಜಗಳ ಸ್ಥಿರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸಹಕಾರಕ್ಕಾಗಿ ಭಾರತ ಹಾಗೂ ಅಮೆರಿಕ ಪ್ರಮುಖವಾದ ಒಪ್ಪಂದ ಮಾಡಿಕೊಂಡಿದೆ.

ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ವಿರಳ ಖನಿಜಗಳ ಪೂರೈಕೆ ಸರಪಳಿಯಲ್ಲಿ ಚೀನಾವು ಬಿಗಿ ನಿಯಂತ್ರಣ ಹೊಂದಿರುವ ಕುರಿತು ಕಳವಳ ವ್ಯಕ್ತವಾದ ಬೆನ್ನಲ್ಲೇ, ಉಭಯ ರಾಷ್ಟ್ರಗಳ ನಡುವಿನ ಒಪ್ಪಂದವು ಮಹತ್ವ ಪಡೆದುಕೊಂಡಿದೆ.

ನವದೆಹಲಿಯಲ್ಲಿ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ನಿರ್ಣಾಯಕ ಹಾಗೂ ವಿರಳ ಖನಿಜಗಳ ಸ್ಥಿರ ಪೂರೈಕೆ ಹಾಗೂ ಸಂಸ್ಕರಣೆ ಕುರಿತ ಒಪ್ಪಂದಕ್ಕೆ ಎರಡು ರಾಷ್ಟ್ರಗಳು ಸಹಿ ಹಾಕಿವೆ.

'ಇದು ಬಹಳ ಸಮಯೋಚಿತ ಹಾಗೂ ನಿರ್ಣಾಯಕ ನಿರ್ಧಾರವಾಗಿದೆ' ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಸಮ್ಮುಖದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಬಣ್ಣಿಸಿದರು.

'ನಿರ್ಣಾಯಕ, ವಿರಳ ಖನಿಜಗಳ ಪೂರೈಕೆ ಉಭಯ ರಾಷ್ಟ್ರಗಳ ಸಹಕಾರ ವನ್ನು ಒಪ್ಪಂದವು ಮತ್ತಷ್ಟು ಬಲಪಡಿಸಲಿದ್ದು, ಗಣಿಗಾರಿಕೆ, ಸಂಸ್ಕರಣೆ, ಮರುಬಳಕೆ ಹಾಗೂ ಹೂಡಿಕೆ ವಿಚಾರದಲ್ಲಿ ಜೊತೆಗೂಡಿ ಕೆಲಸ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

## ಜಿರಲೆ ಪಕ್ಷ: ರಾಜಕೀಯ ಮಾನ್ಯತೆಗೆ ಅರ್ಜಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ದೇಶದಲ್ಲಿ ಆನ್‌ಲೈನ್ ಆಂದೋಲನದ ರೂಪದಲ್ಲಿ ದಿಢೀರ್ ಹುಟ್ಟಿಕೊಂಡ ವಿಡಂಬನಾ ರಾಜಕೀಯ ಪಕ್ಷವಾದ 'ಕಾಕ್ರೋಚ್ ಜನತಾ ಪಾರ್ಟಿ'ಯನ್ನು (ಜಿರಲೆ ಜನತಾ ಪಕ್ಷ- ಸಿಜೆಪಿ) ರಾಜಕೀಯ ಪಕ್ಷವಾಗಿ ನೋಂದಣಿ ಮಾಡಲು ಹರಿಯಾಣದ ವಕೀಲರೊಬ್ಬರು ಕೇಂದ್ರ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದಾರೆ.

'ಸಿಜೆಪಿ' ಹುಟ್ಟಿಗೆ ಕಾರಣವಾದ, ಸದ್ಯ ಅಮೆರಿಕದಲ್ಲಿರುವ ಪುಣೆಯ ಅಭಿಜೀತ್ ದೀಪ್ಕೆ ಭಾರತಕ್ಕೆ ಬಂದು, ಈ ಆಂದೋಲನವನ್ನು ರಾಜಕೀಯ ಚಳವಳಿಯಾಗಿ ಮುನ್ನಡೆಸಲು ಹಿಂದೇಟು ಹಾಕುತ್ತಿರುವುದರಿಂದ, ತಾವು ಈ ಹೊಣೆ ಹೊತ್ತುಕೊಂಡಿರುವುದಾಗಿ ಪಾಣಿಪತ್‌ನ ಸುಧೀರ್ ಜಾಖಡ್ ಹೇಳಿದ್ದಾರೆ. ಮೇ 22ರಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ತಮ್ಮನ್ನು ಸಿಜೆಪಿಯ ರಾಷ್ಟ್ರೀಯ ಸಂಚಾಲಕ ಎಂದು ಸುಧೀರ್ ಹೇಳಿಕೊಂಡಿದ್ದಾರೆ.

'ಬಾಸ್ಟನ್‌ನಲ್ಲಿರುವ ದೀಪ್ಕೆ ಭಾರತಕ್ಕೆ ಬರುವುದಿಲ್ಲ. ಹೀಗಾಗಿ ನಾನೇ ಈ ಚಳವಳಿಯ ನೇತೃತ್ವ ವಹಿಸಿಕೊಂಡಿರುವೆ. ಇಲ್ಲದಿದ್ದರೆ ಬೇರೆ ಯಾರಾದರೂ ರಾಜಕೀಯ ಪಕ್ಷವಾಗಿ 'ಸಿಜೆಪಿ' ನೋಂದಣಿ ಮಾಡಿಕೊಂಡು ದುರ್ಬಳಕೆ ಮಾಡಿಕೊಳ್ಳುತ್ತಾರೆ' ಎಂದು ಸುಧೀರ್ 'ಪ್ರಜಾವಾಣಿ'ಗೆ ತಿಳಿಸಿದರು. 1951ರ ಜನ ಪ್ರಾತಿನಿಧ್ಯ ಕಾಯ್ದೆ, ಸೆಕ್ಷನ್ 29ಎ ಪ್ರಕಾರ, ರಾಜಕೀಯ ಪಕ್ಷವಾಗಿ ಸಿಜೆಪಿ ನೋಂದಣಿ ಮಾಡಲು ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದೇನೆ ಎಂದರು. ವಿದ್ಯಾರ್ಥಿ ಮುಖಂಡ, ರೈತಪರ ಹೋರಾಟಗಾರ ಎಂದೂ ಸುಧೀರ್ ತಮ್ಮನ್ನು ಕರೆದುಕೊಂಡಿದ್ದಾರೆ.

**ಅಭಿಯಾನ:** 'ಕಾಕ್ರೋಚ್ ಜನತಾ ಪಾರ್ಟಿ'ಯಿಂದ ಸ್ಫೂರ್ತಿ ಪಡೆದು, ಕೇಂದ್ರದ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ನಿರುದ್ಯೋಗ ನೀತಿ, ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ, ರಾಷ್ಟ್ರವ್ಯಾಪಿ ಯುವ ಪ್ರತಿರೋಧ ಚಳುವಳಿ ರೀತಿಯಲ್ಲಿ 'ಭಾರತೀಯ ಯುವ ಜಿರಲೆ ಅಭಿಯಾನ'ಕ್ಕೆ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಮಂಗಳವಾರ ಚಾಲನೆ ನೀಡಿದೆ.

# ಜೂನ್‌ನಲ್ಲಿ ಹಣದುಬ್ಬರ ಶೇ 5ಕ್ಕೆ?

### ಇಂಧನ ಬೆಲೆ ಹೆಚ್ಚಳ ಹಾಗೂ ಆಮದು ಸುಂಕ ಏರಿಕೆಯ ಪರಿಣಾಮ

**ನವದೆಹಲಿ (ಪಿಟಿಐ):** ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಹಾಗೂ ಚಿನ್ನ, ಬೆಳ್ಳಿಯ ಮೇಲಿನ ಆಮದು ಸುಂಕದ ಏರಿಕೆಯು ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಜೂನ್ ವೇಳೆಗೆ ಶೇ 5ರ ಮಟ್ಟಕ್ಕೆ ಒಯ್ಯಬಹುದು ಎಂದು ಅರ್ಥಶಾಸ್ತ್ರಜ್ಞರು ಅಂದಾಜು ಮಾಡಿದ್ದಾರೆ.

ಆದರೆ, ರೆಪೊ ದರವನ್ನು ಹೆಚ್ಚು ಮಾಡುವ ಮೊದಲು ಆರ್‌ಬಿಐ ಇಂಧನ ಬೆಲೆ ಏರಿಕೆಯ ಪರಿಣಾಮಗಳು ಒಂದು ಹಂತಕ್ಕೆ ಬರಲಿ ಎಂದು ಕಾಯಬಹುದು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.




11 ದಿನಗಳ ಅಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಲೀಟರಿಗೆ ಕ್ರಮವಾಗಿ ₹7.38 ಹಾಗೂ ₹7.48ರಷ್ಟು ಹೆಚ್ಚಿಸಲಾಗಿದೆ. ಚಿನ್ನ ಹಾಗೂ ಬೆಳ್ಳಿಯ ಆಮದು ಸುಂಕವನ್ನು ಕೇಂದ್ರ ಸರ್ಕಾರವು ಶೇ 15ಕ್ಕೆ ಹೆಚ್ಚಿಸಿದೆ. ಸಿಎನ್‌ಜಿ ಬೆಲೆಯನ್ನು ಕೂಡ ಜಾಸ್ತಿ ಮಾಡಲಾಗಿದೆ.

**ಮುಖ್ಯಾಂಶಗಳು**

- ಜೂನ್‌ನಲ್ಲಿ ರೆಪೊ ದರ ಯಥಾಸ್ಥಿತಿಯಲ್ಲಿ ಇರುವ ಸಾಧ್ಯತೆ
- ಹಣದುಬ್ಬರ ಮತ್ತಷ್ಟು ಜಾಸ್ತಿಯಾಗುವ ಸೂಚನೆ ಸಿಕ್ಕರೆ ರೆಪೊ ಏರಿಕೆ?

'ಪೆಟ್ರೋಲ್, ಡೀಸೆಲ್ ಬೆಲೆಯ ಹೆಚ್ಚಳದ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 0.75ರಷ್ಟು ಜಾಸ್ತಿ ಆಗಬಹುದು. ಹೀಗಾಗಿ ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 4ರಿಂದ ಶೇ 4.5ರ ಮಟ್ಟದಲ್ಲಿ ಇರಬಹುದು. ಜೂನ್‌ನಲ್ಲಿ ಇದು ಶೇ 4.5ರಿಂದ ಶೇ 5ರಷ್ಟು ಆಗಬಹುದು' ಎಂದು 'ಇವೈ ಇಂಡಿಯಾ' ಹಿರಿಯ ಅಧಿಕಾರಿ ಡಿ.ಕೆ. ಶ್ರೀವಾಸ್ತವ ಹೇಳಿದ್ದಾರೆ.

'ಹಣದುಬ್ಬರ ಪ್ರಮಾಣ ಶೇ 5ಕ್ಕಿಂತ ಜಾಸ್ತಿ ಆಗಿ, ಇನ್ನಷ್ಟು ಹೆಚ್ಚಳ ಕಾಣುವ ಸೂಚನೆ ಸಿಕ್ಕರೆ ಬಡ್ಡಿ ದರವನ್ನು ಹೆಚ್ಚಿಸಲು ಆರ್‌ಬಿಐ ಮುಂದಾಗಬಹುದು' ಎಂದು ಅವರು ಅಂದಾಜಿಸಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯು ಜೂನ್ 5ರಂದು ನಡೆಯಲಿದ್ದು, ಸಮಿತಿಯು ದರಗಳಲ್ಲಿ ಯಾವುದೇ ಬದಲಾವಣೆ ಮಾಡದ 'ತಟಸ್ಥ ನಿಲುವು' ಮುಂದುವರಿಸಲಿದೆ ಎಂಬ ನಿರೀಕ್ಷೆಯನ್ನು ಅರ್ಥಶಾಸ್ತ್ರಜ್ಞರು ಹೊಂದಿದ್ದಾರೆ.

'ಜೂನ್‌ನಲ್ಲಿ ರೆಪೊ ದರದಲ್ಲಿ ಬದಲಾವಣೆ ಆಗಲಿಕ್ಕಿಲ್ಲ. ಆದರೆ ಸರಕು ಸಾಗಣೆ ದರ ಹೆಚ್ಚಳ, ಇತರ ಕಚ್ಚಾ ವಸ್ತುಗಳ ಬೆಲೆಯಲ್ಲಿ ಏರಿಕೆ ಹಾಗೂ ಅಂತಿಮವಾಗಿ ಉತ್ಪನ್ನದ ಬೆಲೆಯಲ್ಲಿನ ಏರಿಕೆಯಿಂದಾಗಿ ಈ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಹಣದುಬ್ಬರ ಪ್ರಮಾಣ ನಿಭಾಯಿಸಲು ಆಗದಂತಹ ಮಟ್ಟ ತಲುಪಬಹುದು ಎಂಬ ಚಿಂತೆ ನಮ್ಮನ್ನು ಕಾಡುತ್ತಿದೆ. ಹಾಗೆ ಆದಾಗ ಬಡ್ಡಿ ದರ ಹೆಚ್ಚಳ ಮಾಡಬೇಕಾಗಬಹುದು' ಎಂದು ಬಾರ್ಕ್ಲೇಸ್ ಇಂಡಿಯಾ ಸಂಸ್ಥೆ ಮುಖ್ಯ ಅರ್ಥಶಾಸ್ತ್ರಜ್ಞೆ ಆಸ್ಥಾ ಗುದ್ವಾನಿ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5.1ರ ಮಟ್ಟದಲ್ಲಿ ಇರಬಹುದು ಎಂದು ಕ್ರಿಸಿಲ್ ಸಂಸ್ಥೆಯ ಪ್ರಧಾನ ಅರ್ಥಶಾಸ್ತ್ರಜ್ಞ ದೀಪ್ತಿ ದೇಶಪಾಂಡೆ ಅವರು ಹೇಳಿದ್ದಾರೆ.

# ಇಂಧನ ದರ ಪಾರದರ್ಶಕತೆ ಕೊರತೆ




ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರವನ್ನು 10 ದಿನಗಳಲ್ಲಿ ನಾಲ್ಕು ಬಾರಿ ಏರಿಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ದುಬಾರಿ ಆಗಿರುವುದು ಕಾರಣ ಎನ್ನಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರದ ರಾಜಕೀಯ ಹಿತಾಸಕ್ತಿ, ರಾಜ್ಯಗಳು–ಕೇಂದ್ರದ ವಿವಿಧ ರೀತಿಯ ತೆರಿಗೆಗಳು, ತೈಲ ಕಂಪನಿಗಳ ಲಾಭಕೋರ ಧೋರಣೆ ಎಲ್ಲವೂ ತೈಲ ಬೆಲೆ ನಿರ್ಣಯದ ವಿಚಾರವನ್ನು ಸಂಕೀರ್ಣಗೊಳಿಸಿದ್ದು, ಈ ವಿಚಾರದಲ್ಲಿ ಪಾರದರ್ಶಕತೆ ಮಾಯವಾಗಿದೆ ಎಂಬ ಆರೋಪ ಇದೆ

ಪ್ರಜಾವಾಣಿ ವಾರ್ತೆ

### ಬ್ರೆಂಟ್ ಕಚ್ಚಾ ತೈಲದ ಸರಾಸರಿ ದರ

(ಪ್ರತಿ ಬ್ಯಾರಲ್‌ಗೆ ಡಾಲರ್‌ಗಳಲ್ಲಿ)







### ಪೆಟ್ರೋಲಿಯಂ ವಲಯದಿಂದ ಕೇಂದ್ರ ಬೊಕ್ಕಸಕ್ಕೆ ಸಿಕ್ಕಿದ್ದೆಷ್ಟು? (ಲಕ್ಷ ಕೋಟಿಗಳಲ್ಲಿ)

| | |
|---|---|
| 2014-15 | ₹1.72 |
| 2015-16 | ₹2.54 |
| 2016-17 | ₹3.35 |
| 2017-18 | ₹3.36 |
| 2018-19 | ₹3.48 |
| 2019-20 | ₹3.34 |
| 2020-21 | ₹4.55 |
| 2021-22 | ₹4.92 |
| 2022-23 | ₹4.26 |
| 2023-24 | ₹4.32 |
| 2024-25 | ₹4.24 |
| 2025-26 | ₹3.24 |

**₹43.34** ಲಕ್ಷ ಕೋಟಿ

### ಮಹಾನಗರಗಳಲ್ಲಿ ಪೆಟ್ರೋಲ್, ಡೀಸೆಲ್ ಸರಾಸರಿ ದರ

(ಪ್ರತಿ ಲೀಟರ್‌ಗೆ ₹ಗಳಲ್ಲಿ)




### ತೈಲ ಅಗ್ಗವಾದರೂ ಇಳಿಯದ ದರ

### ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

Deccan Herald- Prajavani Relief Trust

### 'ಶುಲ್ಕ ಪಾವತಿ, ನೋಟ್‌ಬುಕ್ ಖರೀದಿ'



### 'ಬಡ ಪ್ರತಿಭಾವಂತರಿಗೆ ಪ್ರೋತ್ಸಾಹ'



### ಕೇಂದ್ರ-ರಾಜ್ಯಕ್ಕೆ ಆದಾಯ ಮೂಲ

# ‘ಭಾರತ, ಕೆನಡಾ ಎಫ್‌ಟಿಎ ಮಾತುಕತೆ ವರ್ಷಾಂತ್ಯಕ್ಕೆ ಪೂರ್ಣ’

ನವದೆಹಲಿ (ಪಿಟಿಐ): ಕೆನಡಾ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದ ಮಾತುಕತೆಗಳನ್ನು ಈ ವರ್ಷದ ಅಂತ್ಯದ ಹೊತ್ತಿಗೆ ಪೂರ್ಣಗೊಳಿಸುವ ಉದ್ದೇಶ ಇದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.



ಪೀಯೂಷ್ ಗೋಯಲ್

ಗೋಯಲ್ ಅವರು ಈಗ ಕೆನಡಾ ಪ್ರವಾಸದಲ್ಲಿದ್ದಾರೆ. 100ಕ್ಕೂ ಹೆಚ್ಚು ಕಂಪನಿಗಳ ಪ್ರತಿನಿಧಿಗಳನ್ನು ಒಳಗೊಂಡ ನಿಯೋಗದ ನೇತೃತ್ವ ವಹಿಸಿದ್ದಾರೆ.

'ನಮ್ಮ ದೇಶಗಳ ನಾಯಕರು ಎಫ್‌ಟಿಎ ಕುರಿತ ಮಾತುಕತೆಯನ್ನು ವರ್ಷದ ಅಂತ್ಯಕ್ಕೆ ಮೊದಲು ಪೂರ್ಣಗೊಳಿಸುವ ಗುರಿಯನ್ನಷ್ಟೇ ಹಾಕಿಕೊಟ್ಟಿಲ್ಲ. ಬದಲಿಗೆ, ಅವರು ಎರಡೂ ದೇಶಗಳ ವ್ಯಾಪಾರ ವಹಿವಾಟಿನ ಗಾತ್ರವನ್ನು ಮೂರು ಪಟ್ಟು ಹೆಚ್ಚಿಸುವ ಗುರಿಯನ್ನೂ ನಿಗದಿ ಮಾಡಿಕೊಟ್ಟಿದ್ದಾರೆ' ಎಂದು ಗೋಯಲ್ ಅವರು ಕೆನಡಾದ ವ್ಯಾಪಾರ ಸಚಿವ ಮಹೀಂದರ್ ಸಿಧು ಅವರ ಜೊತೆ ಒಟ್ಟಾವದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಗೋಯಲ್ ಅವರು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರನ್ನು ಭೇಟಿ ಮಾಡಿದ್ದಾರೆ. ಒಪ್ಪಂದದ ಕುರಿತಾದ ಮಾತುಕತೆಗಳು ಬೇಗನೆ ಪೂರ್ಣಗೊಳ್ಳುತ್ತವೆ ಎಂಬ ವಿಶ್ವಾಸವನ್ನು ಇಬ್ಬರೂ ವ್ಯಕ್ತಪಡಿಸಿದ್ದಾರೆ.

'ನಾವು ಭಾರತದ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಕುರಿತು ಮಾತುಕತೆ ನಡೆಸುತ್ತಿದ್ದೇವೆ. ಇದು ಕೆನಡಾದ ಕಾರ್ಮಿಕರಿಗೆ ಹಾಗೂ ಉದ್ಯಮಿಗಳಿಗೆ ಮಹತ್ವದ ಬದಲಾವಣೆ ತರಲಿದೆ. ಅವರಿಗೆ ಇದು ಬೃಹತ್ತಾದ ಹೊಸ ಮಾರುಕಟ್ಟೆಯನ್ನು ತೆರೆದುಕೊಡಲಿದೆ...' ಎಂದು ಕಾರ್ನಿ ಅವರು ಸಾಮಾಜಿಕ ಜಾಲತಾಣ ಖಾತೆಯಲ್ಲಿ ಬರೆದಿದ್ದಾರೆ.

ಭಾರತ ಮತ್ತು ಕೆನಡಾ ನಡುವೆ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ ಕುರಿತಾಗಿ ಎರಡು ಸುತ್ತಿನ ಮಾತುಕತೆಗಳು ಪೂರ್ಣಗೊಂಡಿವೆ. ಮೂರನೆಯ ಸುತ್ತಿನ ಮಾತುಕತೆಯು ಒಟ್ಟಾವದಲ್ಲಿ ಮೇ 29ರವರೆಗೆ ನಡೆಯಲಿದೆ.

### ₹11.88 ಲಕ್ಷ ಕೋಟಿ ಬದಲು ₹12.71 ಲಕ್ಷ ಕೋಟಿ ಸಾಲ ನೀಡಿಕೆ

# ಸಾಲ ವಿತರಣೆ: ರಾಜ್ಯದಲ್ಲಿ ಪ್ರಗತಿ

- **₹13.52** ಲಕ್ಷ ಕೋಟಿ — 2026-27ನೇ ಸಾಲಿನಲ್ಲಿ ಸಾಲ ವಿತರಣೆಗೆ ಹಾಕಿಕೊಳ್ಳಲಾದ ಗುರಿ
- **₹5.03** ಲಕ್ಷ ಕೋಟಿ — ಆದ್ಯತಾ ವಲಯ
- **₹2.50** ಲಕ್ಷ ಕೋಟಿ — ಕೃಷಿ ವಲಯ
- **₹2.27** ಲಕ್ಷ ಕೋಟಿ — ಎಂಎಸ್‌ಎಂಇ
- **₹2,528** ಕೋಟಿ — ಶೈಕ್ಷಣಿಕ ವಲಯ
- **₹9,465** ಕೋಟಿ — ವಸತಿ ವಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬ್ಯಾಂಕುಗಳು 2025-26ನೇ ಸಾಲಿನಲ್ಲಿ ಸಾಲ ನೀಡಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ₹11.88 ಲಕ್ಷ ಕೋಟಿ ಗುರಿಗೆ ಪ್ರತಿಯಾಗಿ ₹12.71 ಲಕ್ಷ ಕೋಟಿಯಷ್ಟು ಸಾಲ ವಿತರಣೆ ಮಾಡಿವೆ.

ಸಾಲದ ಬೆಳವಣಿಗೆಯಲ್ಲಿ ರಾಜ್ಯವು ವಾರ್ಷಿಕ ಶೇ 12.77ರಷ್ಟು ಗುರಿ ಸಾಧಿಸಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ (ಶೇ 16.08) ಕಡಿಮೆ. ಠೇವಣಿ ಸಂಗ್ರಹದಲ್ಲೂ ರಾಜ್ಯದ ಬ್ಯಾಂಕ್‌ಗಳು ಶೇ 13.31ರಷ್ಟು ಬೆಳವಣಿಗೆ ಸಾಧಿಸಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ (ಶೇ 13.47) ತುಸು ಕಡಿಮೆ.

ವಿಧಾನಸೌಧದಲ್ಲಿ ಸೋಮವಾರ ನಡೆದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ 175ನೇ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ವಿವರವನ್ನು ಮಂಡಿಸಲಾಗಿದೆ.

ವಸತಿ ಮತ್ತು ಶಿಕ್ಷಣ ಹೊರತುಪಡಿಸಿ ಉಳಿದೆಲ್ಲಾ ವಲಯಗಳಲ್ಲಿ ಬ್ಯಾಂಕುಗಳು ನಿಗದಿತ ಗುರಿಗಿಂತ ಹೆಚ್ಚು ಸಾಧನೆ ಮಾಡಿವೆ.

2025-26ನೇ ಸಾಲಿನ ವಾರ್ಷಿಕ ಸಾಲ ಯೋಜನೆಯಲ್ಲಿ ಆದ್ಯತಾ ವಲಯಕ್ಕೆ ₹4.38 ಲಕ್ಷ ಕೋಟಿಯ ಗುರಿ ಹಾಕಿಕೊಳ್ಳಲಾಗಿದ್ದು, ₹4.73 ಲಕ್ಷ ಕೋಟಿಯಷ್ಟು ಸಾಲ ವಿತರಿಸಲಾಗಿದೆ. ಒಟ್ಟು ಸಾಲದಲ್ಲಿ ಕನಿಷ್ಠ ಶೇ 40ರಷ್ಟನ್ನು ಆದ್ಯತಾ ವಲಯಕ್ಕೆ ವಿತರಣೆ ಮಾಡಬೇಕು ಎಂಬುದು ಆರ್‌ಬಿಐನ ನಿಯಮ. ರಾಜ್ಯದಲ್ಲಿ ಶೇ 42ರಷ್ಟು ಸಾಲವನ್ನು ಆದ್ಯತಾ ವಲಯಕ್ಕೆ ನೀಡಲಾಗಿದೆ. ಇದರಿಂದಾಗಿ ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳ ವೃದ್ಧಿಗೆ ನೆರವಾಗಿದೆ.

ಕೃಷಿ ವಲಯಕ್ಕೆ ಕನಿಷ್ಠ ಶೇ 18ರಷ್ಟು ಸಾಲ ವಿತರಿಸಬೇಕೆಂಬುದು ಬ್ಯಾಂಕ್‌ಗಳು ವಿಧಿಸಿಕೊಂಡ ನಿಯಮ. ಆರ್ಥಿಕ ವರ್ಷದಲ್ಲಿ ಒಟ್ಟಾರೆಯಾಗಿ ಶೇ 22ರಷ್ಟು ಸಾಲವನ್ನು ಕೃಷಿ ವಲಯಕ್ಕೆ ವಿತರಿಸಿ, ಕೃಷಿ ಕ್ಷೇತ್ರದ ಬೆಳವಣಿಗೆಗೆ ರಾಜ್ಯದ ಬ್ಯಾಂಕುಗಳು ನೆರವಾಗಿವೆ. 2025-26ನೇ ಸಾಲಿನಲ್ಲಿ ₹2.22 ಲಕ್ಷ ಕೋಟಿ ಗುರಿ ನೀಡಲಾಗಿದ್ದು, ಅದಕ್ಕೆ ಪ್ರತಿಯಾಗಿ ₹2.47 ಲಕ್ಷ ಕೋಟಿ ಸಾಲ ವಿತರಿಸಲಾಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ವಲಯಕ್ಕೆ ₹2.02 ಲಕ್ಷ ಕೋಟಿ ಸಾಲ ನೀಡಲಾಗಿದೆ. ಇದು ಗುರಿಗಿಂತಲೂ (₹1.90 ಲಕ್ಷ ಕೋಟಿ) ಹೆಚ್ಚು.

ಒಟ್ಟಾರೆಯಾಗಿ ರಾಜ್ಯದಲ್ಲಿ ಸಾಲ ವಿತರಣೆ ಮತ್ತು ಆದ್ಯತಾ ವಲಯಕ್ಕೆ ಸಾಲದ ಲಭ್ಯತೆ ಉತ್ತಮವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಇತರ ಅಂಶಗಳು

- 2025-26ನೇ ಸಾಲಿನಲ್ಲಿ ರಾಜ್ಯದ ಬ್ಯಾಂಕುಗಳ ಠೇವಣಿ ಮಟ್ಟದ ಹೋಲಿಕೆಯಲ್ಲಿ ಶೇ 77ರಷ್ಟು ಸಾಲವನ್ನು ವಿತರಣೆ ಮಾಡಲಾಗಿದೆ. ಈ ಪ್ರಮಾಣವು ಶೇ 70ರಿಂದ ಶೇ 80ರಷ್ಟು ಇರುವುದು ಆರೋಗ್ಯಕರ. ಠೇವಣಿ ಮತ್ತು ಸಾಲ ವಿತರಣೆ ದರದ ರಾಷ್ಟ್ರೀಯ ಸರಾಸರಿ ಶೇ 81.40ರಷ್ಟಿದ್ದು, ರಾಜ್ಯವು ಉತ್ತಮ ಸ್ಥಿತಿಯಲ್ಲಿದೆ
- ವಸತಿ ವಲಯಕ್ಕೆ ನಿಗದಿ ಪಡಿಸಲಾದ ಗುರಿಯಲ್ಲಿ ಶೇ 70ರಷ್ಟು (₹8,191 ಕೋಟಿ), ಶೈಕ್ಷಣಿಕ ವಲಯದ ನಿಗದಿತ ಗುರಿಯಲ್ಲಿ ಶೇ 89ರಷ್ಟು (₹1.987) ಮಾತ್ರ ಸಾಲ ವಿತರಿಸಲಾಗಿದೆ
- ಮುದ್ರಾ ಯೋಜನೆಯಡಿ ಅತಿಹೆಚ್ಚು ಸಾಲ ನೀಡಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು 6ನೇ ಸ್ಥಾನ, ಪಿಎಂ ಸ್ವನಿಧಿ ಯೋಜನೆಯಲ್ಲಿ 7ನೇ ಸ್ಥಾನ ಕಾಯ್ದುಕೊಂಡಿದೆ. ಒಟ್ಟಾರೆ ಸಾಲ ವಿತರಣೆಯಲ್ಲಿ 2ನೇ ಸ್ಥಾನದಲ್ಲಿದೆ

# ಜನಸಂಖ್ಯೆ ಸ್ವರೂಪ ಅಧ್ಯಯನಕ್ಕೆ ಸಮಿತಿ

## ಅಕ್ರಮ ವಲಸೆ, ಅಸ್ವಾಭಾವಿಕ ಬದಲಾವಣೆ ಪರಿಶೀಲನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ವಲಸೆ ಮತ್ತು ಇತರೆ ಅಸ್ವಾಭಾವಿಕ ಕಾರಣಗಳಿಂದ ದೇಶದ ಜನಸಂಖ್ಯೆಯ ಸ್ವರೂಪದಲ್ಲಾಗಿರುವ ಬದಲಾವಣೆಗಳ ಕುರಿತು 'ವೈಜ್ಞಾನಿಕ ಅಧ್ಯಯನ' ನಡೆಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವೋಲೇಕರ್ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಉನ್ನತ ಮಟ್ಟದ ಸಮಿತಿ ರಚಿಸಿದೆ. ಈ ಬಗ್ಗೆ ಕೇಂದ್ರ ಗೃಹ ಸಚಿವಾಲಯವು ಮಂಗಳವಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ. 2025ರ ಸ್ವಾತಂತ್ರ್ಯ ದಿನಾಚರಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಈ ಸಮಿತಿ ರಚಿಸುವ ಬಗ್ಗೆ ಘೋಷಣೆ ಮಾಡಿದ್ದರು. ನಂತರ ಸೆಪ್ಟೆಂಬರ್‌ನಲ್ಲಿ ಸಚಿವ ಸಂಪುಟವು ಇದಕ್ಕೆ ಒಪ್ಪಿಗೆ ನೀಡಿತ್ತು. ವರದಿ ನೀಡಲು ಒಂದು ವರ್ಷ ಕಾಲಾವಕಾಶ ನೀಡಲಾಗಿದೆ.

### ಸಮಿತಿ: ಯಾರಿದ್ದಾರೆ?

1. ನ್ಯಾ. ಪ್ರಕಾಶ್ ಪ್ರಭಾಕರ್ ನವೋಲೇಕರ್, ನಿವೃತ್ತ ನ್ಯಾಯಮೂರ್ತಿ (ಸಮಿತಿ ನೇತೃತ್ವ)
2. ಗಣತಿ ಕಮಿಷನರ್ (ಸದಸ್ಯ)
3. ದುರ್ಗಾ ಶಂಕರ್ ಮಿಶ್ರಾ, ನಿವೃತ್ತ ಐಎಎಸ್ ಅಧಿಕಾರಿ (ತಜ್ಞ ಸದಸ್ಯ)
4. ಬಾಲಾಜಿ ಶ್ರೀವಾಸ್ತವ್, ನಿವೃತ್ತ ಐಪಿಎಸ್ ಅಧಿಕಾರಿ (ತಜ್ಞ ಸದಸ್ಯ)
5. ಶಮಿಕಾ ರವಿ, (ತಜ್ಞ ಸದಸ್ಯೆ, ಪ್ರಧಾನಿ ಆರ್ಥಿಕ ಸಲಹೆಗಾರರ ಸಮಿತಿಯ ಸದಸ್ಯೆ)

**ಒಳನುಸುಳುವಿಕೆ ಮತ್ತು ಇತರೆ ಅಸ್ವಾಭಾವಿಕ ಕಾರಣಗಳಿಂದ ಜನಸಂಖ್ಯೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ. ಇದು ದೇಶದ ಭವಿಷ್ಯಕ್ಕೆ ಪ್ರಮುಖ ಸವಾಲಾಗಲಿದೆ. ಜೊತೆಗೆ, ದೇಶದ ಸಾರ್ವಭೌಮತ್ವ, ಭದ್ರತೆಯೊಂದಿಗೆ ಇದು ಸಂಬಂಧ ಹೊಂದಿದೆ**

**ಅಮಿತ್ ಶಾ,** ಕೇಂದ್ರ ಗೃಹ ಸಚಿವ (ಎಕ್ಸ್ ಪೋಸ್ಟ್)

### ಅಧಿಸೂಚನೆಯಲ್ಲೇನಿದೆ?



- ದೇಶದ ಕೆಲವು ಭಾಗಗಳಲ್ಲಿ ಪ್ರಮುಖವಾಗಿ ಗಡಿ ಜಿಲ್ಲೆಗಳಲ್ಲಿ ಜನಸಂಖ್ಯೆಯ ಸ್ವರೂಪದಲ್ಲಿ ಬದಲಾವಣೆಗಳನ್ನು ಕಾಣಬಹುದಾಗಿದೆ. ಈ ಬದಲಾವಣೆಗಳು ಸ್ವಾಭಾವಿಕವಾಗಿಲ್ಲ. ಅಕ್ರಮ ವಲಸೆ, ನೆರೆಯ ದೇಶದ ಜನರು ನಮ್ಮ ಗಡಿ ಒಳಗೆ ಆಗಿಂದಾಗ್ಗೆ ಬಂದು ಹೋಗುತ್ತಿರುವುದು ಮತ್ತು ಇವುಗಳನ್ನು ತಡೆಗಟ್ಟುವ ಆಡಳಿತಾತ್ಮಕ ವೈಫಲ್ಯದ ಕಾರಣ ಜನಸಂಖ್ಯೆ ಸ್ವರೂಪದಲ್ಲಿ ಬದಲಾವಣೆಗಾಗಿವೆ
- ಈ ಅತಿದೊಡ್ಡ ಸವಾಲು ಕೇವಲ ಗಡಿ ಜಿಲ್ಲೆಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಇದು ಇತರೆ ಪ್ರದೇಶವನ್ನೂ ವ್ಯಾಪಿಸಿದೆ. ನಗರಗಳು, ಕಾರ್ಖಾನೆಗಳು, ಬುಡಕಟ್ಟು ಜನರು ವಾಸಿಸುವ ಪ್ರದೇಶಗಳು ಮತ್ತು ಇತರೆ ಸಾಮಾಜಿಕ ಆರ್ಥಿಕವಾಗಿ ಸೂಕ್ಷ್ಮ ಎನಿಸಿರುವ ಪ್ರದೇಶಗಳಿಗೂ ವ್ಯಾಪಿಸಿದೆ. ಇದರಿಂದ ಸರ್ಕಾರವು ಸೇವೆ ಒದಗಿಸಲು, ಸಂಪನ್ಮೂಲ ಹಂಚಿಕೆ, ಸ್ಥಳೀಯ ಆಡಳಿತ ಮತ್ತು ಸಾಮಾಜಿಕ ಒಗ್ಗಟ್ಟಿಗೆ ಸಮಸ್ಯೆಯಾಗುತ್ತಿದೆ
- ಈ ಸಮಸ್ಯೆಯನ್ನು ಪರಿಹರಿಸಲು ಈಗಿರುವ ಸಾಂಸ್ಥಿಕ ಚೌಕಟ್ಟು ಪೂರಕವಾಗಿಲ್ಲ. ರಾಜ್ಯ-ಕೇಂದ್ರ ಸರ್ಕಾರಗಳ ಮಧ್ಯೆ ಸಹಕಾರ, ಸಾಕ್ಷ್ಯ ಆಧಾರಿತ ಮತ್ತು ಕಾಲಮಿತಿಯೊಳಗೆ ಸಮಸ್ಯೆ ಬಗೆಹರಿಸುವ ವ್ಯವಸ್ಥೆ ಮತ್ತು ಇದಕ್ಕೆ ಪರಿಹಾರ ಸೂಚಿಸುವ ವ್ಯವಸ್ಥೆ ಇಲ್ಲವಾಗಿದೆ

### ಯಾವುದರ ಕುರಿತು ಅಧ್ಯಯನ?

- ಅಕ್ರಮ ವಲಸೆಯೂ ಸೇರಿ ಜನಸಂಖ್ಯೆಯ ಸ್ವರೂಪದಲ್ಲಿ ಆಗಿರುವ ಬದಲಾವಣೆಯಿಂದಾಗಿ ಉದ್ಭವಿಸಿರುವ ಸವಾಲುಗಳ ಬಗ್ಗೆ, ಇದರ ಕಾರಣಗಳ ಬಗ್ಗೆ ಮತ್ತು ಅಸ್ವಾಭಾವಿಕವಾಗಿ ನಮ್ಮ ದೇಶದಲ್ಲಿ ಬಂದು ನೆಲಸಿರುವ ಮಾದರಿಗಳ ಬಗ್ಗೆ ಮತ್ತು ಯೋಜಿತವಾಗಿ ನಡೆಸುವ ಅಕ್ರಮ ವಲಸೆ ಬಗ್ಗೆ ಅಧ್ಯಯನ
- ದೇಶದ ಫಲವಂತಿಕೆ ದರದಲ್ಲಿ ಆದ ಬದಲಾವಣೆಗಳು, ನೆರೆ ದೇಶದ ಜನರು ನಮ್ಮ ದೇಶದೊಳಗೆ ಬಂದು-ಹೋಗುವುದು, ಆರ್ಥಿಕ ಅವಕಾಶಗಳು ಮತ್ತು ಇತರೆ ಸಾಮಾಜಿಕ-ಪರಿಸರ ಕಾರಣಗಳು
- ಧಾರ್ಮಿಕ, ಜಾತಿ-ಸಮುದಾಯಗಳಿಗೆ ಸಂಬಂಧಿಸಿ ಜನಸಂಖ್ಯೆ ಸ್ವರೂಪದಲ್ಲಾದ ಬದಲಾವಣೆ ಕುರಿತು. ಅಸ್ವಾಭಾವಿಕ ಎನಿಸುವ ಅಕ್ರಮ ವಲಸೆಯಿಂದಾದ ಬದಲಾವಣೆಗಳ ಕುರಿತು ಗಮನಹರಿಸಿ ವಿಶ್ಲೇಷಿಸಬೇಕು

### ಸಮಿತಿ ವರದಿಯಲ್ಲೇನಿರಬೇಕು?

- ಕಾನೂನಾತ್ಮಕವಾದ, ನ್ಯಾಯಸಮ್ಮತವಾದ ಮತ್ತು ಕಾಲಮಿತಿ ಇರುವ ಶಾಶ್ವತ ಕಾರ್ಯಯೋಜನೆಯೊಂದನ್ನು ರೂಪಿಸಿ, ಅಕ್ರಮ ವಲಸಿಗರನ್ನು ಗುರುತಿಸುವುದು, ವಶಕ್ಕೆ ಪಡೆಯುವುದು ಮತ್ತು ಅವರದೇ ದೇಶಕ್ಕೆ ವಾಪಸು ಕಳುಹಿಸುವ ಯೋಜನೆ ಇದಾಗಿರಬೇಕಿದೆ
- ದೇಶದ ಗಡಿ ನಿರ್ವಹಣೆ ಶಕ್ತಿಯುತಗೊಳಿಸುವ, ಜನಸಂಖ್ಯೆಯನ್ನು ನಿಯಂತ್ರಿಸುವ ಸಾಂಸ್ಥಿಕ ವ್ಯವಸ್ಥೆಯ ಕುರಿತು ಶಿಫಾರಸು ನೀಡಿ
- ಅಕ್ರಮ ವಲಸೆಯಿಂದಾಗಿ ಜನಸಂಖ್ಯೆ ಸ್ವರೂಪದಲ್ಲಿ ಆಗುವ ಬದಲಾವಣೆಯ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯಗಳ ಮಧ್ಯೆ ಸಹಕಾರವನ್ನು ಹೆಚ್ಚಿಸಲು ನೀತಿಯೊಂದನ್ನು ಶಿಫಾರಸು ಮಾಡಿ

# ಅಂಧ ಅಥ್ಲೀಟ್ ರಕ್ಷಿತಾರಾಜುಗೆ ಚಿನ್ನ

## ಪ್ಯಾರಾ ಅಥ್ಲೆಟಿಕ್ಸ್: ಮೊದಲ ದಿನ ಕರ್ನಾಟಕಕ್ಕೆ 8 ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರಿನ ಅಂಧ ಅಥ್ಲೀಟ್ ರಕ್ಷಿತಾರಾಜು ಅವರು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ ಎಂಟನೇ ಆವೃತ್ತಿಯ 'ಇಂಡಿಯನ್ ಓಪನ್' ಅಂತರರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 1500 ಮೀಟರ್ (ಟಿ11) ಓಟದಲ್ಲಿ ಚಿನ್ನದ ಸಾಧನೆ ಮೆರೆದರು.

ಕೂಟದ ಮೊದಲ ದಿನ ಕರ್ನಾಟಕದ ಪ್ಯಾರಾ ಅಥ್ಲೀಟ್‌ಗಳು ನಾಲ್ಕು ಚಿನ್ನ ಸೇರಿದಂತೆ ಒಟ್ಟು ಎಂಟು ಪದಕಗಳನ್ನು ಗೆದ್ದುಕೊಂಡರು. ಮಹಿಳೆಯರ 100 ಮೀಟರ್ (ಟಿ37) ಓಟದಲ್ಲಿ ಭಾರತಿ ಭರತೇಶ್, ಶಾಟ್‌ಪುಟ್ (ಎಫ್33) ಸ್ಪರ್ಧೆಯಲ್ಲಿ ಮೇಧಾ ಜಯಂತ್, ಪುರುಷರ 1500 ಮೀ. (ಟಿ13) ಓಟದಲ್ಲಿ ಶಂಕರಪ್ಪ ಶರತ್ ಅವರು ಸ್ವರ್ಣ ಗೆದ್ದರು.

ಮಹಿಳೆಯರ ಶಾಟ್‌ಪುಟ್‌ನಲ್ಲಿ (ಎಫ್57) ಶೈಲಾ ಶಿಲ್ಪಾ, 100 ಮೀ ಓಟದಲ್ಲಿ (ಟಿ37) ಹರ್ಷಿತಾ



ಗೈಡ್ ರನ್ನರ್ ರಾಹುಲ್ ಬಾಲಕೃಷ್ಣ ಅವರೊಂದಿಗೆ ಓಡಿದ ರಕ್ಷಿತಾರಾಜು

ಟೀಚರ್, ಪುರುಷರ 100 ಮೀ. (ಟಿ38) ಓಟದಲ್ಲಿ ಸಚ್ಚಿದಾನಂದ ದೇವಾಡಿಗ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಪುರುಷರ 100 ಮೀ (ಟಿ47) ಓಟದಲ್ಲಿ ಬಾಬು ಜಾನು ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಹುಟ್ಟಿನಿಂದಲೇ ದೃಷ್ಟಿಯನ್ನು ಕಳೆದುಕೊಂಡಿರುವ 25 ವರ್ಷ ವಯಸ್ಸಿನ ರಕ್ಷಿತಾರಾಜು 1500 ಮೀಟರ್ ದೂರವನ್ನು 5 ನಿಮಿಷ 17.54 ಸೆಕೆಂಡ್‌ಗಳಲ್ಲಿ ತಲುಪಿದರು.

ಮೂಡಿಗೆರೆ ತಾಲ್ಲೂಕಿನ ಬಾಳೂರಿನ ಗುಡ್ನಳ್ಳಿ ಗ್ರಾಮದ ರಕ್ಷಿತಾರಾಜು ಅವರು ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಸತತ ಎರಡು (2018 ಮತ್ತು 2022) ಬಾರಿ ಚಿನ್ನ ಗೆದ್ದಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಅವರು ಐದನೇ ಸ್ಥಾನ ಗಳಿಸಿದ್ದರು.

'ಇದು ಮುಂದಿನ ಏಷ್ಯನ್ ಗೇಮ್ಸ್‌ಗೆ ಟ್ರಯಲ್ಸ್ ಕೂಡಾ ಆಗಿದ್ದರಿಂದ ಉತ್ತಮ ಸಮಯದಲ್ಲಿ ಗುರಿ ತಲುಪಿ, ಚಿನ್ನ ಗೆದ್ದಿರುವುದು ಖುಷಿ ತಂದಿದೆ. ಏಷ್ಯನ್ ಗೇಮ್ಸ್‌ನಲ್ಲಿ ಹ್ಯಾಟ್ರಿಕ್ ಚಿನ್ನ ಸಾಧನೆ ಮಾಡುವುದು ಮತ್ತು ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವುದು ನನ್ನ ಮುಂದಿನ ಗುರಿಯಾಗಿದೆ. ಈ ನಿಟ್ಟಿನಲ್ಲಿ ಸಾಯ್ ಕೇಂದ್ರದಲ್ಲಿ ಕಠಿಣ ತರಬೇತಿ ನಡೆಸುತ್ತಿದ್ದೇನೆ' ಎಂದು ರಕ್ಷಿತಾರಾಜು ಅವರು 'ಪ್ರಜಾವಾಣಿ' ಜೊತೆ ಸಂತಸ ಹಂಚಿಕೊಂಡರು.

# ಕಾಮನ್‌ವೆಲ್ತ್ ಚೆಸ್: 3 ಚಿನ್ನ ಗೆದ್ದು ಮಿಂಚಿದ ನಕ್ಷತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದಯೋನ್ಮುಖ ಆಟಗಾರ್ತಿ ನಕ್ಷತ್ರ ಗುಮುದವೆಲ್ಲಿ,



ಶ್ರೀಲಂಕಾದ ಕಲುತಾರದಲ್ಲಿ ನಡೆದ ಕಾಮನ್‌ವೆಲ್ತ್ ಯುವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದು ಅಮೋಘ ಸಾಧನೆ ಪ್ರದರ್ಶಿಸಿದ್ದಾಳೆ.

ಹತ್ತು ವರ್ಷದೊಳಗಿನವರ ವಿಭಾಗದಲ್ಲಿ ಆಡಿದ ನಕ್ಷತ್ರಾ, ಕ್ಲಾಸಿಕಲ್ ವಿಭಾಗದಲ್ಲಿ 9 ಸುತ್ತುಗಳಿಂದ 8.5 ಪಾಯಿಂಟ್ಸ್ ಸಂಗ್ರಹಿಸಿದರೆ, ರ್‍ಯಾಪಿಡ್ ವಿಭಾಗದಲ್ಲಿ 7 ಸುತ್ತುಗಳಿಂದ 6.5 ಪಾಯಿಂಟ್ಸ್ ಹಾಗೂ ಬ್ಲಿಟ್ಜ್‌ನಲ್ಲಿ 7ರಲ್ಲಿ 7 ಅಂಕ ಪಡೆದು ಅಜೇಯರಾಗುಳಿದಳು.

ನಗರದ ವೇಲಮ್ಮಾಳ್ ಶಾಲೆಯ ವಿದ್ಯಾರ್ಥಿನಿಯಾಗಿರುವ ನಕ್ಷತ್ರಾ, ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದಾಳೆ.

14 ವರ್ಷದೊಳಗಿನವರ ವಿಭಾಗದಲ್ಲಿ ನಗರದ ಇನ್ನೊಬ್ಬ ಆಟಗಾರ್ತಿ ದಿವ್ಯಶ್ರೀ ಕೊಲ್ಲಿಪಾರ, ರ್‍ಯಾಪಿಡ್ ವಿಭಾಗದಲ್ಲಿ ಬೆಳ್ಳಿ ಮತ್ತು ಕ್ಲಾಸಿಕಲ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಳು.

## ❖ SIRಗೆ ಸುಪ್ರೀಂ ಕೋರ್ಟ್ ಬಲ

### ಸುದ್ದಿಯಲ್ಲೇಕೆ?

ಮತದಾರರ ಪಟ್ಟಿಯ **Special Intensive Revision — SIR** ಪ್ರಕ್ರಿಯೆಯು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಅಗತ್ಯವಾದ ಕ್ರಮವಾಗಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

### SIR ಎಂದರೇನು?

**SIR** ಎಂದರೆ ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಶೀಲಿಸಿ, ಅರ್ಹ ಮತದಾರರನ್ನು ಸೇರಿಸುವುದು ಮತ್ತು ಅನರ್ಹ, ಮರಣ ಹೊಂದಿದ, ಸ್ಥಳಾಂತರಗೊಂಡ ಅಥವಾ ನಕಲಿ ಹೆಸರುಗಳನ್ನು ತೆಗೆದುಹಾಕುವ ವಿಶೇಷ ಪರಿಷ್ಕರಣೆ ಪ್ರಕ್ರಿಯೆ.

### ಪ್ರಮುಖ ಅಂಶಗಳು

| ಅಂಶ | ವಿವರ |
|---|---|
| ಸಂಬಂಧಿತ ಸಂಸ್ಥೆ | ಚುನಾವಣಾ ಆಯೋಗ |
| ಸಂವಿಧಾನಾತ್ಮಕ ಆಧಾರ | ವಿಧಿ 324 |
| ಮುಖ್ಯ ಉದ್ದೇಶ | ಶುದ್ಧ ಮತ್ತು ನಿಖರ ಮತದಾರರ ಪಟ್ಟಿ |
| ಸಂಬಂಧಿತ ಹಕ್ಕು | ಮತದಾನದ ಹಕ್ಕು |
| ನ್ಯಾಯಾಲಯದ ನಿಲುವು | ಚುನಾವಣಾ ಶುದ್ಧತೆ ಪ್ರಜಾಪ್ರಭುತ್ವದ ಆಧಾರ |

### ಮಹತ್ವ

- ಮತದಾರರ ಪಟ್ಟಿಯ ಶುದ್ಧತೆ ಇಲ್ಲದಿದ್ದರೆ ಚುನಾವಣೆಗಳ ವಿಶ್ವಾಸಾರ್ಹತೆ ಕುಸಿಯುತ್ತದೆ.
- ನಕಲಿ ಮತದಾರರು, ಮರಣ ಹೊಂದಿದವರ ಹೆಸರುಗಳು, ದ್ವಂದ್ವ ನೋಂದಣಿ ಮುಂತಾದ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿ.
- ವಲಸೆ, ನಗರೀಕರಣ ಮತ್ತು ಜನಸಂಖ್ಯಾ ಬದಲಾವಣೆಗಳ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯನ್ನು ಕಾಲಕಾಲಕ್ಕೆ ನವೀಕರಿಸುವುದು ಅಗತ್ಯ.

### ಸವಾಲುಗಳು

- ನಿಜವಾದ ಮತದಾರರ ಹೆಸರು ತಪ್ಪಾಗಿ ತೆಗೆದುಹಾಕುವ ಅಪಾಯ.
- ದಾಖಲೆಗಳ ಕೊರತೆಯಿಂದ ಬಡವರು, ವಲಸಿಗರು ಮತ್ತು ಅಂಚಿನ ಸಮುದಾಯಗಳಿಗೆ ತೊಂದರೆ.
- ನಾಗರಿಕತ್ವ ಪರಿಶೀಲನೆ ರಾಜಕೀಯ ವಿವಾದವಾಗುವ ಸಾಧ್ಯತೆ.
- ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಮೇಲ್ಮನವಿ ವ್ಯವಸ್ಥೆ ಅಗತ್ಯ.

## ❖ ಅಧಿಕಾರದ ನಶೆ ಮತ್ತು ಸಾರ್ವಜನಿಕ ಸೇವೆಯ ನೈತಿಕತೆ

### ಸುದ್ದಿಯಲ್ಲೇಕೆ?
ಅಧಿಕಾರಸ್ಥರ ವರ್ತನೆ, ಸಾರ್ವಜನಿಕರೊಂದಿಗೆ ನಡೆದುಕೊಳ್ಳುವ ರೀತಿ ಮತ್ತು ಅಧಿಕಾರದ ದುರುಪಯೋಗ ಕುರಿತು ನೈತಿಕ ಚರ್ಚೆ ಪ್ರಸ್ತುತವಾಗಿದೆ.

### ವಿಷಯದ ಅರ್ಥ
ಸಾರ್ವಜನಿಕ ಹುದ್ದೆ ಎಂದರೆ ಜನಸೇವೆಗಾಗಿ ನೀಡಿದ ಜವಾಬ್ದಾರಿ. ಆದರೆ ಅಧಿಕಾರವು ಅಹಂಕಾರ, ದೌರ್ಜನ್ಯ ಅಥವಾ ವಿಶೇಷಾಧಿಕಾರದ ಭಾವನೆಗೆ ಕಾರಣವಾದರೆ ಅದು ಆಡಳಿತದ ನೈತಿಕತೆಯನ್ನು ಹಾಳುಮಾಡುತ್ತದೆ.

Dr. Rajkumar IAS/KAS Academy

**ಪ್ರಮುಖ ನೈತಿಕ ಮೌಲ್ಯಗಳು**

| ಮೌಲ್ಯ | ವಿವರಣೆ |
|---|---|
| ಪ್ರಾಮಾಣಿಕತೆ | ಅಧಿಕಾರವನ್ನು ವೈಯಕ್ತಿಕ ಲಾಭಕ್ಕೆ ಬಳಸಬಾರದು |
| ವಿನಯ | ಅಧಿಕಾರ ಜನಸೇವೆಗೆ ಮಾತ್ರ |
| ಜವಾಬ್ದಾರಿತ್ವ | ನಿರ್ಧಾರಗಳಿಗೆ ಸಾರ್ವಜನಿಕ ಉತ್ತರದಾಯಿತ್ವ |
| ಸಹಾನುಭೂತಿ | ದುರ್ಬಲ ವರ್ಗಗಳ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು |
| ಕಾನೂನಿನ ಆಳ್ವಿಕೆ | ಯಾರೂ ಕಾನೂನಿಗಿಂತ ಮೇಲಲ್ಲ |

**ಆಡಳಿತಕ್ಕೆ ಮಹತ್ವ**

- ಸಾರ್ವಜನಿಕ ವಿಶ್ವಾಸ ಉಳಿಯುತ್ತದೆ.
- ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ಕಡಿಮೆಯಾಗುತ್ತದೆ.
- ನಾಗರಿಕ ಕೇಂದ್ರಿತ ಆಡಳಿತ ಬಲವಾಗುತ್ತದೆ.
- ಸೇವಾ ವಿತರಣೆಯಲ್ಲಿ ಮಾನವೀಯ ದೃಷ್ಟಿಕೋನ ಬರುತ್ತದೆ.

## ❖ ಮಾತುಕತೆಗೆ ಬರಲಿದೆ ಅಮೆರಿಕ ನಿಯೋಗ

**ಸುದ್ದಿಯಲ್ಲೇಕೆ?**

ಭಾರತ–ಅಮೆರಿಕ ವ್ಯಾಪಾರ ಮತ್ತು ತಂತ್ರಜ್ಞಾನ ಸಂಬಂಧಗಳನ್ನು ವಿಸ್ತರಿಸಲು ಅಮೆರಿಕ ನಿಯೋಗ ಭಾರತಕ್ಕೆ ಆಗಮಿಸುವ ಸಾಧ್ಯತೆ ಸುದ್ದಿಯಲ್ಲಿದೆ.

**ಚರ್ಚೆಯಾಗಬಹುದಾದ ಪ್ರಮುಖ ವಿಷಯಗಳು**

- ದ್ವಿಪಕ್ಷೀಯ ವ್ಯಾಪಾರ ಒಪ್ಪಂದ
- ಸುಂಕ ಮತ್ತು ಮಾರುಕಟ್ಟೆ ಪ್ರವೇಶ
- ಕೃಷಿ ಮತ್ತು ಡೈರಿ ಉತ್ಪನ್ನಗಳು
- ಔಷಧಿ ಮತ್ತು ವೈದ್ಯಕೀಯ ಸಾಧನಗಳು
- ಸೆಮಿಕಂಡಕ್ಟರ್, AI, ಡಿಜಿಟಲ್ ತಂತ್ರಜ್ಞಾನ
- ಪೂರೈಕೆ ಸರಪಳಿ ಭದ್ರತೆ
- ರಕ್ಷಣಾ ಮತ್ತು ಕಾರ್ಯತಂತ್ರದ ಸಹಕಾರ

**ಭಾರತಕ್ಕೆ ಮಹತ್ವ**

| ಆಯಾಮ | ಮಹತ್ವ |
|---|---|
| ಆರ್ಥಿಕ | ರಫ್ತು, ಹೂಡಿಕೆ, ಉದ್ಯೋಗ ಸೃಷ್ಟಿ |
| ತಂತ್ರಜ್ಞಾನ | ಸೆಮಿಕಂಡಕ್ಟರ್, AI, ಕ್ಲೀನ್ ಟೆಕ್ ಸಹಕಾರ |
| ರಕ್ಷಣಾ | ಇಂಡೋ-ಪೆಸಿಫಿಕ್ ಭದ್ರತಾ ಸಹಕಾರ |
| ಪೂರೈಕೆ ಸರಪಳಿ | ಚೀನಾ ಅವಲಂಬನೆ ಕಡಿಮೆ ಮಾಡುವ ಅವಕಾಶ |
| ವಲಸೆ | H-1B, ಕೌಶಲ್ಯ ಕಾರ್ಮಿಕರು, ವಿದ್ಯಾರ್ಥಿಗಳು |

Dr. Rajkumar IAS/KAS Academy

**ಸವಾಲುಗಳು**

- ಅಮೆರಿಕದ ಕೃಷಿ ಮತ್ತು ಡೈರಿ ಉತ್ಪನ್ನಗಳಿಗೆ ಭಾರತ ಮಾರುಕಟ್ಟೆ ತೆರೆಯುವ ಒತ್ತಡ.
- ಭಾರತೀಯ ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿ.
- ಔಷಧಿ ಬೆಲೆ, ಬೌದ್ಧಿಕ ಆಸ್ತಿ ಹಕ್ಕುಗಳು.
- ಡೇಟಾ ಹರಿವು ಮತ್ತು ಡಿಜಿಟಲ್ ವ್ಯಾಪಾರ ನಿಯಮಗಳು.

## ❖ SARTHAK-PDS: ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಹೊಸ ತಂತ್ರಜ್ಞಾನ

**ಸುದ್ದಿಯಲ್ಲೇಕೆ?**

ಕೇಂದ್ರ ಸರ್ಕಾರವು **SARTHAK Public Distribution System** ಯೋಜನೆಗೆ ಅನುಮೋದನೆ ನೀಡಿದೆ. ಇದು ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ತಂತ್ರಜ್ಞಾನ ಆಧಾರಿತವಾಗಿ ಬಲಪಡಿಸುವ ಯೋಜನೆ.

**SARTHAK-PDS ಎಂದರೇನು?**

ಇದು ಆಹಾರ ಧಾನ್ಯಗಳ ವಿತರಣೆ, ಫಲಾನುಭವಿಗಳ ಗುರುತಿಸುವಿಕೆ, ಸಾಗಣೆ ಮತ್ತು ನಾಗರಿಕ ಪ್ರತಿಕ್ರಿಯೆ ವ್ಯವಸ್ಥೆಯನ್ನು ಆಧುನಿಕಗೊಳಿಸುವ ಯೋಜನೆ.

**ಪ್ರಮುಖ ಅಂಶಗಳು**

| ಅಂಶ | ವಿವರ |
|---|---|
| ಯೋಜನೆ | SARTHAK-PDS |
| ಅವಧಿ | 5 ವರ್ಷ |
| ವೆಚ್ಚ | ₹25,530 ಕೋಟಿ |
| ಉದ್ದೇಶ | ಆಹಾರ ಭದ್ರತೆ ಮತ್ತು PDS ದಕ್ಷತೆ |
| ಉಪಕರಣಗಳು | ತಂತ್ರಜ್ಞಾನ, ಡೇಟಾ, ಪ್ರತಿಕ್ರಿಯೆ ವ್ಯವಸ್ಥೆ |

**ಮುಖ್ಯ ಉದ್ದೇಶಗಳು**

- ಅರ್ಹ ಫಲಾನುಭವಿಗಳ ನಿಖರ ಗುರುತಿಸುವಿಕೆ.
- ಆಹಾರ ಧಾನ್ಯಗಳ ಚಲನವಲನದ ಮೇಲ್ವಿಚಾರಣೆ.
- ಸಾಗಣೆ ಅಂತರ ಕಡಿಮೆ ಮಾಡುವುದು.
- ಸೋರಿಕೆ ಮತ್ತು ದ್ವಂದ್ವ ಫಲಾನುಭವಿಗಳ ಸಮಸ್ಯೆ ಕಡಿಮೆ ಮಾಡುವುದು.
- ನಾಗರಿಕರಿಂದ ಮುಂಚಿತ ಪ್ರತಿಕ್ರಿಯೆ ಪಡೆಯುವುದು.

**ಮಹತ್ವ**

- ಆಹಾರ ಭದ್ರತೆ ಬಲಪಡಿಸುತ್ತದೆ.
- ಬಡವರಿಗೆ ಸಬ್ಸಿಡಿ ಧಾನ್ಯಗಳ ಸರಿಯಾದ ವಿತರಣೆ.
- ಡಿಜಿಟಲ್ ಮೇಲ್ವಿಚಾರಣೆಯಿಂದ ಭ್ರಷ್ಟಾಚಾರ ಕಡಿತ.
- One Nation One Ration Card ಮುಂತಾದ ಸುಧಾರಣೆಗಳಿಗೆ ಪೂರಕ.

**ಸವಾಲುಗಳು**

- ಡಿಜಿಟಲ್ ಹೊರಗುಳಿಕೆ.
- ಆಧಾರ್ ದೃಢೀಕರಣ ವೈಫಲ್ಯ.
- ಗ್ರಾಮೀಣ ಇಂಟರ್ನೆಟ್ ಸಮಸ್ಯೆ.
- ಸ್ಥಳೀಯ ಮಟ್ಟದಲ್ಲಿ ಡೇಟಾ ದೋಷ.
- ವಲಸೆ ಕಾರ್ಮಿಕರಿಗೆ ಸಮರ್ಪಕ ಪ್ರವೇಶ.

Dr Rajkumar IAS/KAS Academy

## ❖ ಚಂದ್ರನಲ್ಲಿ ಶಾಶ್ವತ ನೆಲೆ: ನಾಸಾ

**ಸುದ್ದಿಯಲ್ಲೇಕೆ?**

ಚಂದ್ರನಲ್ಲಿ ದೀರ್ಘಕಾಲಿಕ ಮಾನವ ವಾಸ ಅಥವಾ ವೈಜ್ಞಾನಿಕ ನೆಲೆ ಸ್ಥಾಪನೆ ಕುರಿತು ನಾಸಾ ಮತ್ತು ಇತರೆ ಬಾಹ್ಯಾಕಾಶ ಸಂಸ್ಥೆಗಳ ಪ್ರಯತ್ನಗಳು ಮತ್ತೆ ಚರ್ಚೆಯಲ್ಲಿವೆ.

**ಚಂದ್ರ ನೆಲೆ ಎಂದರೇನು?**

ಚಂದ್ರನ ಮೇಲ್ಮೈಯಲ್ಲಿ ಮಾನವರು ದೀರ್ಘಕಾಲ ಉಳಿದು ಸಂಶೋಧನೆ, ಸಂಪನ್ಮೂಲ ಬಳಕೆ ಮತ್ತು ಭವಿಷ್ಯದ ಮಂಗಳ ಯಾನಗಳಿಗೆ ಸಿದ್ಧತೆ ನಡೆಸಲು ನಿರ್ಮಿಸುವ ನೆಲೆಯನ್ನು ಚಂದ್ರ ನೆಲೆ ಎಂದು ಕರೆಯಬಹುದು.

**ಏಕೆ ಚಂದ್ರನ ದಕ್ಷಿಣ ಧ್ರುವ ಮಹತ್ವದ್ದು?**

- ನೀರಿನ ಮಂಜುಗಡ್ಡೆ ಇರುವ ಸಾಧ್ಯತೆ.
- ಶಾಶ್ವತ ನೆರಳು ಪ್ರದೇಶಗಳಲ್ಲಿ ನೀರು ಸಂರಕ್ಷಿತವಾಗಿರಬಹುದು.
- ನೀರನ್ನು ಕುಡಿಯುವ ನೀರು, ಆಮ್ಲಜನಕ ಮತ್ತು ರಾಕೆಟ್ ಇಂಧನವಾಗಿ ಬಳಸಬಹುದು.
- ಭವಿಷ್ಯದ ಬಾಹ್ಯಾಕಾಶ ಆರ್ಥಿಕತೆಗೆ ಮೂಲ ಸಂಪನ್ಮೂಲ.

**ಭಾರತದ ಸಂಪರ್ಕ**

- **ಚಂದ್ರಯಾನ-1:** ಚಂದ್ರನಲ್ಲಿ ನೀರಿನ ಅಣುಗಳ ಪತ್ತೆಗೆ ಮಹತ್ವದ ಪಾತ್ರ.
- **ಚಂದ್ರಯಾನ-2:** Orbiter ಇನ್ನೂ ವೈಜ್ಞಾನಿಕ ಮಾಹಿತಿ ನೀಡುತ್ತಿದೆ.
- **ಚಂದ್ರಯಾನ-3:** ದಕ್ಷಿಣ ಧ್ರುವ ಪ್ರದೇಶದ ಸಮೀಪ ಯಶಸ್ವಿ ಸಾಫ್ಟ್ ಲ್ಯಾಂಡಿಂಗ್.
- **ISRO–NASA ಸಹಕಾರ:** ಬಾಹ್ಯಾಕಾಶ ಸಂಶೋಧನೆಯಲ್ಲಿ ಹೆಚ್ಚುತ್ತಿರುವ ಸಹಕಾರ.

**ಮಹತ್ವ**

- ಚಂದ್ರ ಸಂಪನ್ಮೂಲ ಬಳಕೆ.
- ಮಂಗಳ ಯಾನಗಳಿಗೆ ಮಧ್ಯ ಹಂತ.
- ಬಾಹ್ಯಾಕಾಶ ತಂತ್ರಜ್ಞಾನ ಅಭಿವೃದ್ಧಿ.
- ವಿಜ್ಞಾನ, ರಕ್ಷಣಾ ಮತ್ತು ಆರ್ಥಿಕ ಆಯಾಮ.

**ಸವಾಲುಗಳು**

- ಅತಿಯಾದ ತಾಪಮಾನ ವ್ಯತ್ಯಾಸ.
- ಕಿರಣೋತ್ಪಾತದ ಅಪಾಯ.
- ಮಾನವ ಜೀವನಾಧಾರ ವ್ಯವಸ್ಥೆ.
- ಅಂತರರಾಷ್ಟ್ರೀಯ ಬಾಹ್ಯಾಕಾಶ ಕಾನೂನು.
- ಚಂದ್ರ ಸಂಪನ್ಮೂಲಗಳ ಮಾಲೀಕತ್ವದ ಪ್ರಶ್ನೆ.

## ❖ ಆಧಾರ್ ಪೌರತ್ವದ ಪುರಾವೆಯಲ್ಲ: ಸುಪ್ರೀಂ ಕೋರ್ಟ್

**ಸುದ್ದಿಯಲ್ಲೇಕೆ?**

ಸುಪ್ರೀಂ ಕೋರ್ಟ್, **ಆಧಾರ್ ಕಾರ್ಡ್ ಪೌರತ್ವದ ಪುರಾವೆಯಲ್ಲ** ಎಂದು ಸ್ಪಷ್ಟಪಡಿಸಿದೆ.

Dr. Rajkumar IAS/KAS Academy

**ಆಧಾರ್ ಏನು?**

ಆಧಾರ್ ಒಂದು **ಗುರುತು ದೃಢೀಕರಣ ದಾಖಲೆ**. ಇದು ಬಯೋಮೆಟ್ರಿಕ್ ಮತ್ತು ಜನಸಾಂಖ್ಯಿಕ ಮಾಹಿತಿಯ ಆಧಾರದ ಮೇಲೆ ನೀಡಲಾಗುತ್ತದೆ.

**ಆಧಾರ್ ಏನಲ್ಲ?**

| ವಿಷಯ | ಆಧಾರ್‌ನ ಸ್ಥಾನ |
|---|---|
| ಗುರುತು ದೃಢೀಕರಣ | ಹೌದು |
| ಪೌರತ್ವದ ಪುರಾವೆ | ಇಲ್ಲ |
| ಮತದಾರರ ಅರ್ಹತೆಯ ಅಂತಿಮ ದಾಖಲೆ | ಇಲ್ಲ |
| ವಾಸಸ್ಥಳದ ಅಂತಿಮ ಪುರಾವೆ | ಇಲ್ಲ |

**ಮಹತ್ವ**

- ಗುರುತು ಮತ್ತು ಪೌರತ್ವದ ನಡುವಿನ ವ್ಯತ್ಯಾಸ ಸ್ಪಷ್ಟವಾಗುತ್ತದೆ.
- ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಬೇರೆ ಕಾನೂನುಬದ್ಧ ದಾಖಲೆಗಳ ಅಗತ್ಯ ಇರಬಹುದು.
- ಅಕ್ರಮ ವಲಸೆ, ನಾಗರಿಕತ್ವ ಪರಿಶೀಲನೆ ಮತ್ತು ಮತದಾರರ ಪಟ್ಟಿ ಶುದ್ಧತೆ ಕುರಿತ ಚರ್ಚೆಗೆ ಮಹತ್ವ.
- ಆಧಾರ್‌ನ ಅತಿವ್ಯಾಪ್ತ ಬಳಕೆ ಕುರಿತು ಎಚ್ಚರಿಕೆ.

## ❖ UCCಗೆ ಅನುಮೋದನೆ

**ಸುದ್ದಿಯಲ್ಲೇಕೆ?**

ಯುನಿಫಾರ್ಮ್ ಸಿವಿಲ್ ಕೋಡ್ ಕುರಿತು ರಾಜ್ಯ ಮಟ್ಟದ ಕಾನೂನು ಕ್ರಮಗಳು ಮತ್ತೆ ಸುದ್ದಿಯಲ್ಲಿವೆ.

**UCC ಎಂದರೇನು?**

**Uniform Civil Code** ಎಂದರೆ ಮದುವೆ, ವಿಚ್ಛೇದನ, ವಾರಸುದಾರಿಕೆ, ದತ್ತು, ಜೀವನಸಂಗಾತಿ ಸಂಬಂಧಿತ ನಾಗರಿಕ ವಿಷಯಗಳಲ್ಲಿ ಎಲ್ಲ ನಾಗರಿಕರಿಗೂ ಸಾಮಾನ್ಯ ಕಾನೂನು.

**ಸಂವಿಧಾನಾತ್ಮಕ ಸಂಪರ್ಕ**

| ವಿಧಿ | ವಿಷಯ |
|---|---|
| ವಿಧಿ 44 | ರಾಜ್ಯವು ನಾಗರಿಕರಿಗೆ ಸಾಮಾನ್ಯ ನಾಗರಿಕ ಸಂಹಿತೆ ಒದಗಿಸಲು ಪ್ರಯತ್ನಿಸಬೇಕು |
| ಭಾಗ IV | ರಾಜ್ಯ ನೀತಿ ನಿರ್ದೇಶಕ ತತ್ವಗಳು |
| ಸಮವರ್ತಿ ಪಟ್ಟಿ | ಮದುವೆ, ವಿಚ್ಛೇದನ, ವಾರಸುದಾರಿಕೆ ವಿಷಯಗಳು |

**ಪರವಾದ ವಾದಗಳು**

- ಲಿಂಗ ಸಮಾನತೆ.
- ಮಹಿಳೆಯರ ಹಕ್ಕು ರಕ್ಷಣೆ.
- ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆ.
- ರಾಷ್ಟ್ರೀಯ ಏಕತೆ.
- ಕಾನೂನಿನ ಮುಂದೆ ಸಮಾನತೆ.

Dr. Rajkumar IAS/KAS Academy

**ವಿರೋಧದ ವಾದಗಳು**

- ಧಾರ್ಮಿಕ ಸ್ವಾತಂತ್ರ್ಯದ ಆತಂಕ.
- ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳ ಪ್ರಶ್ನೆ.
- ಜನಾಂಗೀಯ/ಆದಿವಾಸಿ ಸಂಪ್ರದಾಯಗಳ ರಕ್ಷಣೆ.
- ಸಮಾಲೋಚನೆ ಇಲ್ಲದೆ ಜಾರಿಯಾದರೆ ವಿರೋಧ ಹೆಚ್ಚಾಗಬಹುದು.

**ಸಮತೋಲನದ ದೃಷ್ಟಿಕೋನ**

UCC ಜಾರಿ ಕೇವಲ ಕಾನೂನು ಕ್ರಮವಾಗಿರಬಾರದು; ಅದು **ಸಮಾಲೋಚನೆ, ಹಂತ ಹಂತದ ಸುಧಾರಣೆ, ಲಿಂಗ ನ್ಯಾಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಸಮತೋಲನ**ದೊಂದಿಗೆ ಇರಬೇಕು.

## ❖ ತ್ರಿಭಾಷಾ ನೀತಿ: ಶಿಕ್ಷಣ ಮತ್ತು ಭಾಷಾ ವೈವಿಧ್ಯತೆ

**ಸುದ್ದಿಯಲ್ಲೇಕೆ?**

ತ್ರಿಭಾಷಾ ಸೂತ್ರ, ಶಾಲಾ ಶಿಕ್ಷಣ ಮತ್ತು ಭಾಷಾ ಕಲಿಕೆ ಕುರಿತು ಮತ್ತೆ ಚರ್ಚೆ ಉದ್ಭವಿಸಿದೆ.

**ತ್ರಿಭಾಷಾ ಸೂತ್ರ ಎಂದರೇನು?**

ವಿದ್ಯಾರ್ಥಿಗಳು ಶಾಲೆಯಲ್ಲಿ ಮೂರು ಭಾಷೆಗಳನ್ನು ಕಲಿಯುವ ವ್ಯವಸ್ಥೆ. ಸಾಮಾನ್ಯವಾಗಿ ರಾಜ್ಯ ಭಾಷೆ/ಮಾತೃಭಾಷೆ, ಹಿಂದಿ ಮತ್ತು ಇಂಗ್ಲಿಷ್ ಅಥವಾ ಇತರೆ ಭಾಷೆಗಳ ಸಮತೋಲನ ಇದರ ಉದ್ದೇಶ.

**ಭಾಷಾ ನೀತಿಯ ಮಹತ್ವ**

| ಆಯಾಮ | ವಿವರ |
|---|---|
| ಶಿಕ್ಷಣ | ಮಾತೃಭಾಷೆಯಲ್ಲಿ ಕಲಿಕೆ ಸುಲಭ |
| ಸಂಸ್ಕೃತಿ | ಭಾಷೆ ಗುರುತು ಮತ್ತು ಪರಂಪರೆಯ ಭಾಗ |
| ಉದ್ಯೋಗ | ಇಂಗ್ಲಿಷ್ ಮತ್ತು ಇತರೆ ಭಾಷೆಗಳು ಅವಕಾಶ ವಿಸ್ತರಿಸುತ್ತವೆ |
| ರಾಷ್ಟ್ರೀಯ ಏಕತೆ | ಭಾಷಾ ವೈವಿಧ್ಯತೆಯಲ್ಲಿ ಏಕತೆ |
| ಸಂಘೀಯತೆ | ರಾಜ್ಯಗಳ ಭಾಷಾ ಹಕ್ಕುಗಳಿಗೆ ಗೌರವ |

**ಸಂವಿಧಾನಾತ್ಮಕ ಸಂಪರ್ಕ**

| ವಿಧಿ | ವಿಷಯ |
|---|---|
| ವಿಧಿ 29 | ಭಾಷೆ, ಲಿಪಿ, ಸಂಸ್ಕೃತಿ ರಕ್ಷಣೆ |
| ವಿಧಿ 30 | ಅಲ್ಪಸಂಖ್ಯಾತರ ಶಿಕ್ಷಣ ಹಕ್ಕು |
| ವಿಧಿ 350A | ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣಕ್ಕೆ ವ್ಯವಸ್ಥೆ |
| 8ನೇ ಅನುಸೂಚಿ | ಮಾನ್ಯ ಭಾಷೆಗಳ ಪಟ್ಟಿ |

Dr. Rajkumar IAS/KAS Academy

**ಸವಾಲುಗಳು**

- ಭಾಷಾ ಹೇರಿಕೆ ಎಂಬ ಆತಂಕ.
- ಶಿಕ್ಷಕರ ಕೊರತೆ.
- ಬಹುಭಾಷಾ ಪಠ್ಯಪುಸ್ತಕಗಳ ಕೊರತೆ.
- ಮಾತೃಭಾಷೆ ಮತ್ತು ಉದ್ಯೋಗ ಭಾಷೆಯ ನಡುವೆ ಸಮತೋಲನ.

**ಉತ್ತಮ ಮಾರ್ಗ**

ಭಾಷಾ ನೀತಿ ಬಲವಂತದಂತೆ ಕಾಣಬಾರದು. ಅದು ಸ್ಥಳೀಯ ಭಾಷೆಯ ಗೌರವ, ವಿದ್ಯಾರ್ಥಿಗಳ ಆಯ್ಕೆ ಮತ್ತು ಬಹುಭಾಷಾ ಸಾಮರ್ಥ್ಯವನ್ನು ಉತ್ತೇಜಿಸುವ ರೀತಿಯಲ್ಲಿ ಇರಬೇಕು.

## ❖ ಭಾರತಕ್ಕೆ ಜಾಗತಿಕ ರಿಲೇ ಕೂಟದ ಆತಿಥ್ಯ

**ಸುದ್ದಿಯಲ್ಲೇಕೆ?**

ಭಾರತವು ಪ್ರಮುಖ ಅಂತರರಾಷ್ಟ್ರೀಯ ಅಥ್ಲೆಟಿಕ್ಸ್/ರಿಲೇ ಕೂಟಕ್ಕೆ ಆತಿಥ್ಯ ವಹಿಸುವ ವಿಚಾರ ಸುದ್ದಿಯಲ್ಲಿದೆ.

**ಏಕೆ ಮಹತ್ವದ್ದು?**

ಜಾಗತಿಕ ಕ್ರೀಡಾ ಕೂಟಗಳಿಗೆ ಆತಿಥ್ಯ ವಹಿಸುವುದು ಕೇವಲ ಕ್ರೀಡಾ ಸಾಧನೆಯ ವಿಷಯವಲ್ಲ; ಅದು ಮೂಲಸೌಕರ್ಯ, ಪ್ರವಾಸೋದ್ಯಮ, ಯುವ ಕ್ರೀಡಾಪಟುಗಳ ಪ್ರೇರಣೆ ಮತ್ತು ದೇಶದ ಜಾಗತಿಕ ಚಿತ್ರಣಕ್ಕೆ ಸಂಬಂಧಿಸಿದೆ.

**ಪ್ರಮುಖ ಆಯಾಮಗಳು**

| ಆಯಾಮ | ಮಹತ್ವ |
|---|---|
| ಕ್ರೀಡೆ | ಭಾರತೀಯ ಅಥ್ಲೆಟಿಕ್ಸ್‌ಗೆ ಉತ್ತೇಜನ |
| ಯುವಜನತೆ | ಯುವ ಕ್ರೀಡಾಪಟುಗಳಿಗೆ ಪ್ರೇರಣೆ |
| ಆರ್ಥಿಕತೆ | ಕ್ರೀಡಾ ಪ್ರವಾಸೋದ್ಯಮ ಮತ್ತು ಸ್ಥಳೀಯ ಆದಾಯ |
| ಮೂಲಸೌಕರ್ಯ | ಸ್ಟೇಡಿಯಂ, ತರಬೇತಿ ಕೇಂದ್ರಗಳ ಅಭಿವೃದ್ಧಿ |
| ಜಾಗತಿಕ ಚಿತ್ರಣ | ಭಾರತವನ್ನು ಕ್ರೀಡಾ ರಾಷ್ಟ್ರವಾಗಿ ಬಿಂಬಿಸುವುದು |

**ಭಾರತಕ್ಕೆ ಲಾಭ**

- ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸೌಕರ್ಯಗಳ ಅಭಿವೃದ್ಧಿ.
- ಭಾರತೀಯ ಕ್ರೀಡಾಪಟುಗಳಿಗೆ ತವರಿನಲ್ಲಿ ಸ್ಪರ್ಧಿಸುವ ಅವಕಾಶ.
- ಖೇಲೋ ಇಂಡಿಯಾ, Fit India, TOPS ಮುಂತಾದ ಯೋಜನೆಗಳಿಗೆ ಪೂರಕ.
- ಖಾಸಗಿ ಹೂಡಿಕೆ ಮತ್ತು ಕ್ರೀಡಾ ಆರ್ಥಿಕತೆಗೆ ಉತ್ತೇಜನ.

**ಸವಾಲುಗಳು**

- ಸಮಯಕ್ಕೆ ಮೂಲಸೌಕರ್ಯ ಸಿದ್ಧಪಡಿಸುವುದು.
- ಹಣಕಾಸು ಪಾರದರ್ಶಕತೆ.
- ಕ್ರೀಡಾ ಸಂಸ್ಥೆಗಳ ವೃತ್ತಿಪರ ಆಡಳಿತ.
- ದೀರ್ಘಕಾಲೀನ ಕ್ರೀಡಾ ಪ್ರತಿಭೆ ಅಭಿವೃದ್ಧಿ.

Dr. Rajkumar IAS/KAS Academy

### ಸುಪ್ರೀಂ ಕೋರ್ಟ್‌ನಿಂದ 'ಸೇವ್‌ಲೈಫ್ ಫೌಂಡೇಷನ್'ನ ಅರ್ಜಿ ವಿಚಾರಣೆ

# 'ತುರ್ತು ಚಿಕಿತ್ಸೆ ಬದುಕುವ ಹಕ್ಕಿನ ಅವಿಭಾಜ್ಯ ಭಾಗ'

ನವದೆಹಲಿ(ಪಿಟಿಐ): ಅಪಘಾತವೂ ಸೇರಿ ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ಸಿಗಬೇಕು. ಇದು ಪ್ರತಿಯೊಬ್ಬ ನಾಗರಿಕನ ಹಕ್ಕು. ಇದು ಸಂವಿಧಾನದ 21ನೇ ವಿಧಿಯಲ್ಲಿ ಹೇಳಿರುವ ಬದುಕುವ ಹಕ್ಕಿನ ಅವಿಭಾಜ್ಯ ಭಾಗವೂ ಆಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಸಕಾಲಿಕ ಚಿಕಿತ್ಸೆ ಸಿಗಬೇಕು. ಇದು ಎಲ್ಲರ ಹಕ್ಕು ಎಂಬುದಾಗಿ ಪರಿಗಣಿಸಬೇಕು ಎಂದು ಕೋರಿ 'ಸೇವ್‌ಲೈಫ್ ಫೌಂಡೇಷನ್' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಹೊರಡಿಸಿರುವ ಆದೇಶದಲ್ಲಿ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ. ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಹಾಗೂ ಎ.ಎಸ್.ಚಂದೂರಕರ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿ, ಮಂಗಳವಾರ ಆದೇಶ ಹೊರಡಿಸಿದೆ.

'ಯಾವುದೇ ವ್ಯಕ್ತಿ ಅಪಘಾತಕ್ಕೆ ಒಳಗಾಗಿ ಗಾಯಗೊಂಡಾಗ ತುರ್ತು ಚಿಕಿತ್ಸೆಯ ಅಗತ್ಯವಿರುತ್ತದೆ. ಇಂತಹ ಸಂದರ್ಭದಲ್ಲಿ, ಅವರಿಗೆ ಏನು ಮಾಡಬೇಕು ಎಂಬುದು ಕೂಡ ತೋಚುವುದಿಲ್ಲ. ಅವರಲ್ಲಿ ಅಸಹಾಯಕತೆ ಮನೆ ಮಾಡಿರುತ್ತದೆ. ತಮ್ಮ ಸುತ್ತಲು ಇರುವವರು ಏನಾದರೂ ಸಹಾಯ ಮಾಡುತ್ತಾರೆ ಎಂಬ ಭರವಸೆಯನ್ನೂ ಅವರು ಹೊಂದಿರುತ್ತಾರೆ' ಎಂದು ಪೀಠ ಹೇಳಿದೆ.

'ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಪ್ರತಿ ನಿಮಿಷವೂ ಅಮೂಲ್ಯ. ಇಂತಹ ವೇಳೆ ವೈದ್ಯಕೀಯ ನೆರವು ಇಲ್ಲವೇ ತುರ್ತು ಆರೈಕೆ ಸಿಗದಿದ್ದರೆ ವ್ಯಕ್ತಿಯು ಬದುಕುಳಿಯುವ ಸಾಧ್ಯತೆ ಕ್ಷೀಣಿಸುತ್ತದೆ. ಇಂತಹ ಸಂದರ್ಭಗಳಲ್ಲಾ ಕ್ಷಿಪ್ರವಾಗಿ ಸ್ಪಂದಿಸುವುದು ಕೂಡ ಔಷಧವೇ ಎನಿಸಲಿದೆ' ಎಂದು ಹೇಳಿದೆ.

ರಸ್ತೆ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಗಾಯಾಳುಗಳಿಗೆ ನಗದು ರಹಿತ ಚಿಕಿತ್ಸೆ ಒದಗಿಸುವುದಕ್ಕೆ ರೂಪಿಸಿರುವ 'ಪಿಎಂ ರಾಹತ್' ಜಾರಿಗೊಳಿಸದ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಈ ಯೋಜನೆಯನ್ನು ಮೂರು ತಿಂಗಳ ಒಳಗಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ ಪೀಠ, ವಿಚಾರಣೆಯನ್ನು ನಾಲ್ಕು ತಿಂಗಳ ನಂತರ ನಡೆಸುವುದಾಗಿ ಪ್ರಕಟಿಸಿತು.




## '112': 3 ತಿಂಗಳಲ್ಲಿ ಕಾರ್ಯಾಚರಣೆಗೆ ಕ್ರಮ: ಸೂಚನೆ

ಅಪಘಾತವೂ ಸೇರಿ ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ನೀಡುವುದಕ್ಕಾಗಿ ಸಹಾಯವಾಣಿ '112', ಮೂರು ತಿಂಗಳ ಒಳಗಾಗಿ ಕಾರ್ಯಾಚರಣೆ ಆರಂಭಿಸಬೇಕು. ಕುಂದು ಕೊರತೆಗಳ ಪರಿಹಾರಕ್ಕೆ ವ್ಯವಸ್ಥೆಯೊಂದನ್ನು ಸಹ ಸ್ಥಾಪಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಈ ಸಂಬಂಧ ಕೈಗೊಂಡ ಕ್ರಮಗಳ ಪರಿಶೀಲನೆಗೆ ಪ್ರತಿ ತಿಂಗಳು ಸಭೆ ನಡೆಸಿ, ನಿಯಮಿತವಾಗಿ ಅನುಪಾಲನಾ ವರದಿ ಸಲ್ಲಿಸಬೇಕು. ಸಭೆಯ ನಡಾವಳಿಗಳನ್ನು ಸಂಬಂಧಪಟ್ಟ ಪೋರ್ಟಲ್‌ಗಳಲ್ಲಿ ಅಳವಡಿಸಬೇಕು ಎಂದೂ ಸೂಚಿಸಿದೆ.

ಅಪಘಾತಕ್ಕೆ ಒಳಗಾದವರಿಗೆ ವೈದ್ಯಕೀಯ ನೆರವು ನೀಡುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಬೇಕು. ಈ ಮಾರ್ಗಸೂಚಿ ಅನ್ವಯ ಸಹಾಯವಾಣಿಯು ಮೂರು ತಿಂಗಳ ಒಳಗಾಗಿ ಕಾರ್ಯಾಚರಣೆ ಆರಂಭಿಸಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಳ್ಳಬೇಕು ಎಂದೂ ನಿರ್ದೇಶನ ನೀಡಿದೆ.



### ನಿರ್ದೇಶನಗಳು

- ನೋಂದಾಯಿತ ಆಂಬುಲೆನ್ಸ್‌ಗಳಲ್ಲಿ (ಸರ್ಕಾರಿ ಮತ್ತು ಖಾಸಗಿ) ಜಿಪಿಎಸ್ ಹಾಗೂ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಅಳವಡಿಸಬೇಕು
- ನೈಜ ಸಮಯದಲ್ಲಿ ಸ್ಪಂದಿಸಲು ಸಾಧ್ಯವಾಗುವಂತೆ ಈ ಸಾಧನಗಳನ್ನು ಸಹಾಯವಾಣಿ 112 ಜೊತೆ ಸಂಯೋಜಿಸಿರಬೇಕು
- ಅಪಘಾತ ರಿಜಿಸ್ಟ್ರಿ (ಟ್ರಾಮಾ ರಿಜಿಸ್ಟ್ರಿ) ನಿರ್ವಹಣೆ ಮಾಡಬೇಕು. ಇದಕ್ಕಾಗಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ 8 ವಾರಗಳ ಒಳಗಾಗಿ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಬೇಕು
- ಸಹಾಯವಾಣಿ 112 ಕುರಿತು ಬಹು ಭಾಷೆಗಳಲ್ಲಿ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನಡೆಸಬೇಕು
- ಗಾಯಾಳುಗಳಿಗೆ ನೆರವು ನೀಡಲು ಧಾವಿಸುವವರಿಗೆ ಮೋಟಾರು ವಾಹನಗಳ ಕಾಯ್ದೆ ಸೆಕ್ಷನ್ 134ಎ ಅಡಿ ರಕ್ಷಣೆ ಒದಗಿಸಬೇಕು
- ಅಪಘಾತಕ್ಕೆ ಒಳಗಾದವರಿಗೆ ನಗದು ರಹಿತ ಚಿಕಿತ್ಸೆ ಯೋಜನೆ (ಪಿಎಂ ರಾಹತ್) ಅಡಿ ವೈದ್ಯಕೀಯ ನೆರವು ನೀಡಲು ಕ್ರಮ ಕೈಗೊಳ್ಳಬೇಕು

Publication Date
29/05/2026

Presented by ಪ್ರಜಾವಾಣಿ

Dr. Rajkumar IAS

# ಪ್ಯಾರಾ ಅಥ್ಲೆಟಿಕ್ಸ್ ಪ್ರೀತಿ ದಾಖಲೆ

ಬೆಂಗಳೂರು: ಪ್ಯಾರಾಲಿಂಪಿಕ್ಸ್ ಅವಳಿ ಕಂಚಿನ ಪದಕ ವಿಜೇತೆ ಪ್ರೀತಿ ಪಾಲ್ ಗುರುವಾರ ಇಲ್ಲಿ ಮುಕ್ತಾಯಗೊಂಡ ಎಂಟನೇ ಆವೃತ್ತಿಯ ಇಂಡಿಯನ್ ಓಪನ್ ಅಂತರರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 200 ಮೀಟರ್ (ಟಿ35) ಓಟದಲ್ಲಿ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ಉತ್ತರ ಪ್ರದೇಶದ ಈ ಪ್ಯಾರಾ ಅಥ್ಲೀಟ್ 29.33 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. 30.01 ಸೆಕೆಂಡ್ ಅವರ ಈ ಹಿಂದಿನ ರಾಷ್ಟ್ರೀಯ ದಾಖಲೆಯ ಸಮಯವಾಗಿತ್ತು. ಅವರು 100 ಮೀ. (ಟಿ35) ಓಟದಲ್ಲೂ (13.94 ಸೆ) ರಾಷ್ಟ್ರೀಯ ದಾಖಲೆಯೊಂದಿಗೆ ಸ್ವರ್ಣ ಗೆದ್ದಿದ್ದಾರೆ.

ಕರ್ನಾಟಕದ ಅಥ್ಲೀಟ್ ಶರತ್ ಎಂ.ಎಸ್. ಅವರು ಪುರುಷರ 5,000 ಮೀ (ಟಿ12/ಟಿ 13) ಸ್ಪರ್ಧೆಯನ್ನು 16 ನಿ. 28.00 ಸೆಕೆಂಡ್‌ಗಳಲ್ಲಿ ಕ್ರಮಿಸಿ ಬೆಳ್ಳಿ ಪದಕ ಗೆದ್ದರು. ಕೂಟದ ಮೊದಲ ದಿನ ಅವರು 1500 ಮೀ (ಟಿ 13) ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ಪುರುಷರ ಲಾಂಗ್‌ಜಂಪ್ (ಟಿ11) ಸ್ಪರ್ಧೆಯಲ್ಲಿ ರಕ್ಷಿತ್ ಎಚ್. ಸೋಮಶೇಖರ 5.01 ಮೀ. ಸಾಧನೆಯೊಂದಿಗೆ ಕಂಚಿನ ಪದಕ ಗೆದ್ದರು.


IAS/KAS Academy

# ಇಂಧನ ವಲಯದಲ್ಲಿ ಹೂಡಿಕೆ ಹೆಚ್ಚಳ: ಐಇಎ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಇಂಧನ ಕ್ಷೇತ್ರದ ಮೇಲೆ ದೇಶದಲ್ಲಿ ಆಗುವ ಹೂಡಿಕೆಯು 170 ಬಿಲಿಯನ್ ಅಮೆರಿಕನ್ ಡಾಲರ್‌ಗೆ (ಅಂದಾಜು ₹16.28 ಲಕ್ಷ ಕೋಟಿ) ಹೆಚ್ಚಲಿದೆ ಎಂದು ಅಂತರರಾಷ್ಟ್ರೀಯ ಇಂಧನ ಏಜೆನ್ಸಿ (ಐಇಎ) ಅಂದಾಜು ಮಾಡಿದೆ.

ಸೌರಶಕ್ತಿ ಹಾಗೂ ತೈಲ ಸಂಸ್ಕರಣೆ ಕ್ಷೇತ್ರದ ಮೇಲಿನ ಹೂಡಿಕೆಯು ಈ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ಅದು ಹೇಳಿದೆ.

ಕಳೆದ ಐದು ವರ್ಷಗಳಲ್ಲಿ ಭಾರತವು ಇಂಧನ ಕ್ಷೇತ್ರದ ಮೇಲೆ ಮಾಡುವ ಹೂಡಿಕೆಯು ವಾರ್ಷಿಕ ಸರಾಸರಿ ಶೇ 11ರಷ್ಟು ಬೆಳವಣಿಗೆ ಕಾಣುತ್ತಿದೆ. ಸೌರಶಕ್ತಿ ಹಾಗೂ ತೈಲ ಸಂಸ್ಕರಣಾ ವಲಯಗಳ ಮೇಲಿನ ಹೂಡಿಕೆಯು ಒಟ್ಟು ಇಂಧನ ಹೂಡಿಕೆಯ ಕಾಲು ಭಾಗದಷ್ಟು ಆಗಿದೆ ಎಂದು ಐಇಎ ಸಿದ್ಧಪಡಿಸಿರುವ 'ವಿಶ್ವ ಇಂಧನ ಹೂಡಿಕೆ 2026' ವರದಿಯಲ್ಲಿ ಉಲ್ಲೇಖಿಸಲಾಗಿದೆ.

ತೈಲ ಸಂಸ್ಕರಣಾ ಕ್ಷೇತ್ರದ ಮೇಲಿನ ಹೂಡಿಕೆಯು ಹೆಚ್ಚಳ ಕಂಡಿರುವುದರಿಂದಾಗಿ ದೇಶವು ತನ್ನ ತೈಲ ಸಂಸ್ಕರಣಾ ಸಾಮರ್ಥ್ಯವನ್ನು 2030ರ ವೇಳೆಗೆ ಶೇ 15ರಷ್ಟು ಹೆಚ್ಚಿಸಿಕೊಳ್ಳುವ ಹಾದಿಯಲ್ಲಿದೆ. ಐಇಎ ವರದಿಯ ಪ್ರಕಾರ ಕಲ್ಲಿದ್ದಲು ಪೂರೈಕೆಯ ಮೇಲೆ ಭಾರಿ ಮೊತ್ತ ಹೂಡಿಕೆ ಮಾಡಿರುವ ದೇಶಗಳ ಪಟ್ಟಿಯಲ್ಲಿ ಭಾರತವು 2ನೇ ಸ್ಥಾನದಲ್ಲಿದೆ. ಒಂದು ದಶಕದ ಅವಧಿಯಲ್ಲಿ ಈ ವಲಯದಲ್ಲಿ ದೇಶದ ಹೂಡಿಕೆಯು 3 ಪಟ್ಟು ಹೆಚ್ಚಾಗಿದೆ.

Publication Date
29/05/2026

Presented by ಪ್ರಜಾವಾಣಿ

## ಪ್ರಯಾಣಿಕರ ದಟ್ಟಣೆವುಳ್ಳ 2ನೇ ನಿಲ್ದಾಣ

**2008ರಲ್ಲಿ ಕಾರ್ಯಾರಂಭ ಮಾಡಿದ ದೇವನಹಳ್ಳಿ ವಿಮಾನ ನಿಲ್ದಾಣ ಇದೀಗ 18 ವರ್ಷ ಯಶಸ್ವಿ ಕಾರ್ಯಾಚರಣೆ ಪೂರ್ಣಗೊಳಿಸಿದೆ.**

# ಮುಂಬೈ ವಿಮಾನ ನಿಲ್ದಾಣ ಹಿಂದಿಕ್ಕಿದ ಕೆಐಎ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ) ದೇಶದ ಎರಡನೇ ಪ್ರಯಾಣಿಕರ ದಟ್ಟಣೆವುಳ್ಳ ವಿಮಾನ ನಿಲ್ದಾಣವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಹಿಂದಿಕ್ಕಿದೆ. ದೆಹಲಿ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮೊದಲ ಸ್ಥಾನದಲ್ಲಿದೆ.



ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಬಿಡುಗಡೆ ಮಾಡಿದ ಏಪ್ರಿಲ್ ತಿಂಗಳ ಅಂಕಿ-ಅಂಶದ ಪ್ರಕಾರ, ಕೆಐಎ ಮೂಲಕ ಒಟ್ಟು 31,78,826 ದೇಶಿ ಪ್ರಯಾಣಿಕರು ಹಾರಾಟ ನಡೆಸಿದ್ದಾರೆ. ಮುಂಬೈ ವಿಮಾನ ನಿಲ್ದಾಣದ ಮೂಲಕ 28,93,286 ಮಂದಿ ಪ್ರಯಾಣಿಸಿದ್ದಾರೆ. ಮೊದಲ ಸ್ಥಾನದಲ್ಲಿರುವ ದೆಹಲಿ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ 49,29,982 ಪ್ರಯಾಣಿಕರು ಪ್ರಯಾಣಿಸಿದ್ದಾರೆ.

ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭವಾದ ಬಳಿಕ ಸಂಚಾರದ ಒಂದು ಭಾಗ ಅಲ್ಲಿಗೆ ವರ್ಗಾವಣೆಯಾಗಿರುವುದರಿಂದ ಛತ್ರಪತಿ ಶಿವಾಜಿ ವಿಮಾನ ನಿಲ್ದಾಣದ ಸ್ಥಾನ ಕುಸಿಯಲು ಕಾರಣ ಎಂದು ತಿಳಿದುಬಂದಿದೆ. ನವಿ ಮುಂಬೈ ವಿಮಾನ ನಿಲ್ದಾಣ ಏಪ್ರಿಲ್‌ನಲ್ಲಿ 5,24,594 ಪ್ರಯಾಣಿಕರನ್ನು ನಿರ್ವಹಿಸಿದೆ.

ಮುಂಬಯಿ ಮೂಲಕ 11,53,949 ಹಾಗೂ ಕೆಐಎ ಮೂಲಕ 5,06,309 ಅಂತರರಾಷ್ಟ್ರೀಯ ಪ್ರಯಾಣಿಕರು ಸಂಚರಿಸಿದ್ದಾರೆ. 17,22,208 ಪ್ರಯಾಣಿಕರೊಂದಿಗೆ ದೆಹಲಿ ಅಗ್ರಸ್ಥಾನದಲ್ಲಿದೆ. 2026ರ ಏಪ್ರಿಲ್ ವೇಳೆಗೆ ಒಟ್ಟು 40 ಕೋಟಿ ಪ್ರಯಾಣಿಕರ ಸಂಚಾರದ ಐತಿಹಾಸಿಕ ಮೈಲುಗಲ್ಲು ದಾಟಿದೆ.

# ಜೀವಾವಧಿ ಸಾಧ್ಯವಿಲ್ಲದಿದ್ದರಷ್ಟೇ ಮರಣ ದಂಡನೆ

## ಶಿಕ್ಷೆಯು ಅಪರಾಧದ ಗಂಭೀರತೆಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಬೇಕು: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಇಲ್ಲ ಎಂಬ ತೀರ್ಮಾನಕ್ಕೆ ಬಂದಾಗ ಮಾತ್ರ ಮರಣ ದಂಡನೆ ವಿಧಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಅಪರೂಪದಲ್ಲಿ ಅಪರೂಪವೆನಿಸಿದ ಪ್ರಕರಣಗಳಲ್ಲಿ ಸಾಧಾರಣ ಜೀವಾವಧಿ ಶಿಕ್ಷೆ ಸಾಕಾಗುವುದಿಲ್ಲ ಎಂದು ನ್ಯಾಯಾಲಯಗಳು ಭಾವಿಸಿದಲ್ಲಿ, ಕ್ಷಮಾಪಣೆಗೆ ಅವಕಾಶ ಇಲ್ಲದ ನಿರ್ದಿಷ್ಟ ಅವಧಿಯ ಜೀವಾವಧಿ ಶಿಕ್ಷೆ ವಿಧಿಸಬೇಕು. ಇಂತಹ ಸಂದರ್ಭಗಳಲ್ಲಿ ನೀಡುವ ಶಿಕ್ಷೆಯು ಅಪರಾಧದ ಗಂಭೀರತೆಗೆ ಅನುಗುಣವಾಗಿ ಇರುವಂತೆ ನೋಡಿಕೊಳ್ಳಬೇಕು' ಎಂದೂ ಹೇಳಿದೆ.

ಉತ್ತರಾಖಂಡದಲ್ಲಿ ತನ್ನ ಮಾಜಿ ಉದ್ಯೋಗದಾತ ಮತ್ತು ಸೂಪರ್‌ವೈಸರ್ ಹತ್ಯೆ ಮಾಡಿದ್ದ ವ್ಯಕ್ತಿಗೆ ವಿಧಿಸಿದ್ದ ಮರಣ ದಂಡನೆಯನ್ನು 25 ವರ್ಷ ಜೈಲು ಶಿಕ್ಷೆಯಾಗಿ ಮಾರ್ಪಡಿಸಿ ತೀರ್ಪು ನೀಡಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ತನಗೆ ಮರಣ ದಂಡನೆ ವಿಧಿಸಿ ಹೊರಡಿಸಿದ್ದ ಆದೇಶ ಎತ್ತಿ ಹಿಡಿದು ಉತ್ತರಾಖಂಡ ಹೈಕೋರ್ಟ್ 2018ರಲ್ಲಿ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಶಹಜಾದ್ ಅಲಿ ಅಲಿಯಾಸ್ ಅಲಿ ಉರ್ ರೆಹಮಾನ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಹಾಗೂ ವಿಜಯ ಬಿಷ್ಣೋಯಿ ಅವರು ಇದ್ದ ನ್ಯಾಯಪೀಠ ನಡೆಸಿತು.

ಡೆಹ್ರಾಡೂನ್ ಜಿಲ್ಲೆಯ ಸೆಲಾಕುಯಿ ಪ್ರದೇಶದಲ್ಲಿ ಸಂಜಯ ಕುಮಾರ್ ಗುಲೇರಿಯಾ ಮಾಲೀಕತ್ವದ ದ್ವಿಚಕ್ರ ವಾಹನ ಶೋರೂಮ್‌ನಲ್ಲಿ ಅಲಿ ಹೆಡ್ ಮೆಕ್ಯಾನಿಕ್ ಆಗಿದ್ದ. ಶೋರೂಮ್‌ನ ಸೂಪರ್‌ವೈಸರ್ ಲಲಿತಾ ಅವರ ದೂರು ಆಧರಿಸಿ, ಅಲಿಯನ್ನು ಗುಲೇರಿಯಾ ಕೆಲಸದಿಂದ ತೆಗೆದು ಹಾಕಿದ್ದರು.

ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಅಲಿ ಮಾಡಿದ್ದ ಮನವಿಗಳಿಗೆ ಗುಲೇರಿಯಾ ಸ್ಪಂದಿಸಿರಲಿಲ್ಲ. ಇದರಿಂದ ಆಕ್ರೋಶಗೊಂಡ ಅಲಿ, ಶೋರೂಮ್‌ನಲ್ಲಿಯೇ ಗುಲೇರಿಯಾ ಅವರ ಕತ್ತು ಸೀಳಿ ಹತ್ಯೆ ಮಾಡಿದ್ದ. ಜೀವ ಭಯದಿಂದ ಓಡಿಹೋಗಲು ಯತ್ನಿಸಿದ್ದ ಲಲಿತಾ ಅವರನ್ನು ಬೆನ್ನಟ್ಟಿದ್ದ ಅಲಿ, ಸಮೀಪದ ಖಾಲಿ ಜಾಗದಲ್ಲಿ ಹಲವು ಬಾರಿ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದ. ನಂತರ ಶೋರೂಮ್‌ಗೆ ಬೆಂಕಿ ಹಚ್ಚಿ, ದ್ವಿಚಕ್ರ ವಾಹನದಲ್ಲಿ ಪರಾರಿಯಾಗಿದ್ದ.

ಸಾಕ್ಷ್ಯಾಧಾರಗಳ ಆಧಾರದಲ್ಲಿ ಅಲಿಗೆ ನೀಡಿದ್ದ ಮರಣದಂಡನೆಯನ್ನು ಎತ್ತಿ ಹಿಡಿದು ಹೈಕೋರ್ಟ್ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಅಲಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಮೇ 6ರಂದು ತೀರ್ಪು ನೀಡಿದೆ.



'ಇದು, ಅಪರಾಧಿಗೆ ಮರಣ ದಂಡನೆ ನೀಡುವಂತಹ 'ಅಪರೂಪದಲ್ಲಿಯೇ ಅಪರೂಪ' ವರ್ಗಕ್ಕೆ ಸೇರಿದ ಪ್ರಕರಣವಲ್ಲ. ಮೇಲ್ಮನವಿದಾರನಿಂದ ಸಮಾಜಕ್ಕೆ ಬೆದರಿಕೆ ಇದೆ ಅಥವಾ ಮನಪರಿವರ್ತನೆ ಆತನಿಂದ ಸಾಧ್ಯ ಇಲ್ಲ ಎಂಬುದನ್ನು ಸಾಬೀತುಪಡಿಸುವ ಯಾವುದೇ ದಾಖಲೆಗಳು ಇಲ್ಲ' ಎಂದು ಪೀಠವು ತೀರ್ಪಿನಲ್ಲಿ ಹೇಳಿದೆ.

'ಅಲಿ ಸಮಾಜದ ಕೆಳ ಸ್ತರಕ್ಕೆ ಸೇರಿದ ವ್ಯಕ್ತಿ ಹಾಗೂ ಜೀವನೋಪಾಯಕ್ಕಾಗಿ ಆಸರೆಯಾಗಿದ್ದ ಕೆಲಸವನ್ನೂ ಕಳೆದುಕೊಂಡಿದ್ದ. ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಆತ ಪದೇಪದೇ ಮಾಡಿದ್ದ ಮನವಿಗಳನ್ನು ತಿರಸ್ಕರಿಸಲಾಗಿತ್ತು. ಇದರಿಂದ ಅವಮಾನ ಅನುಭವಿಸಿದ್ದ ಆತ, ತೀವ್ರವಾಗಿ ಹತಾಶಗೊಂಡಿದ್ದ' ಎಂದು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ.

ಸ್ವಾಮಿ ಶ್ರದ್ಧಾನಂದ(2008) ಹಾಗೂ ಕೇಂದ್ರ ಸರ್ಕಾರ ವಿರುದ್ಧ ವಿ.ಶ್ರೀಹರನ್(2016) ಪ್ರಕರಣಗಳಲ್ಲಿನ ತೀರ್ಪನ್ನು ಉಲ್ಲೇಖಿಸಿರುವ ಪೀಠ, ಅಲಿಗೆ ನೀಡಿದ್ದ ಮರಣ ದಂಡನೆಯನ್ನು ಯಾವುದೇ ಕ್ಷಮಾಪಣೆಗೆ ಅವಕಾಶ ಇಲ್ಲದೆ 25 ವರ್ಷಗಳ ಜೈಲು ಶಿಕ್ಷೆಯಾಗಿ ಮಾರ್ಪಡಿಸಿದೆ.

## ಕಾಯ್ದಿರಿಸಿದ ತೀರ್ಪು: 3 ತಿಂಗಳಲ್ಲಿ ಪ್ರಕಟಿಸಿ

ನವದೆಹಲಿ (ಪಿಟಿಐ): ಕಾಯ್ದಿರಿಸಿದ ತೀರ್ಪುಗಳನ್ನು ಮೂರು ತಿಂಗಳೊಳಗೆ ಪ್ರಕಟಿಸುವಂತೆ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶಿಸಿದೆ. ವಿಳಂಬವು ದಾವೆದಾರರಿಗೆ ಸರಿಪಡಿಸಲಾಗದ ನಷ್ಟವನ್ನು ಉಂಟು ಮಾಡುತ್ತದೆ ಎಂದಿರುವ ನ್ಯಾಯಾಲಯ, ವೈಯಕ್ತಿಕ ಸ್ವಾತಂತ್ರ್ಯದ ಪ್ರಕರಣಗಳಲ್ಲಿ ತ್ವರಿತ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆಯೂ ಸೂಚಿಸಿದೆ. ಹೈಕೋರ್ಟ್ ತೀರ್ಪನ್ನು ಅಪ್‌ಲೋಡ್ ಮಾಡುವಲ್ಲಿ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಹೈಕೋರ್ಟ್‌ಗಳಿಗೆ ಹಲವು ನಿರ್ದೇಶನಗಳನ್ನು ನೀಡಿದೆ.



### 'ಸುಪ್ರೀಂ' ನಿರ್ದೇಶನಗಳು

- ಜಾಮೀನು ಅರ್ಜಿಗಳ ಕುರಿತ ಆದೇಶಗಳನ್ನು ಅದೇ ದಿನ ಪ್ರಕಟಿಸಬೇಕು. ಒಂದು ವೇಳೆ ಅವುಗಳನ್ನು ಕಾಯ್ದಿರಿಸಿದ್ದರೆ ಮರುದಿನ ಪ್ರಕಟಿಸಿ, ಅಪ್‌ಲೋಡ್ ಮಾಡಬೇಕು
- ಜಾಮೀನು ಅಥವಾ ಶಿಕ್ಷೆಯ ಅಮಾನತು ಆದೇಶ ಪ್ರಕಟವಾದ ತಕ್ಷಣ ಜೈಲು ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಮತ್ತು ವಿಚಾರಣಾಧೀನ ಅಥವಾ ಶಿಕ್ಷೆಗೊಳಗಾದವರನ್ನು ಅದೇ ದಿನ ಅಥವಾ ಹೆಚ್ಚೆಂದರೆ ಮರುದಿನ ಬಿಡುಗಡೆ ಮಾಡಬೇಕು
- ಆದೇಶ ಕಾಯ್ದಿರಿಸಿದ ನಾಲ್ಕು ತಿಂಗಳೊಳಗೆ ತೀರ್ಪು ಪ್ರಕಟಿಸದಿದ್ದರೆ, ಕಕ್ಷಿದಾರರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನು ಸಂಪರ್ಕಿಸಿ, ಪ್ರಕರಣವನ್ನು ಬೇರೆ ಪೀಠಕ್ಕೆ ವರ್ಗಾಯಿಸುವಂತೆ ಕೋರಬಹುದು
- ಮುಕ್ತ ನ್ಯಾಯಾಲಯದಲ್ಲಿ ತೀರ್ಪು ನೀಡಿದಾಗ, 24 ಗಂಟೆಗಳ ಒಳಗೆ ತೀರ್ಪನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು
- ಸುಪ್ರೀಂ ಕೋರ್ಟ್ ನೀಡಿದ ಈ ನಿರ್ದೇಶನಗಳು ಯಾವುದೇ ನಿರ್ದಿಷ್ಟ ನ್ಯಾಯಮೂರ್ತಿ ಅಥವಾ ಹೈಕೋರ್ಟ್ ತೀರ್ಪಿನ ಕುರಿತ ಆಕ್ಷೇಪಣೆಗಳಲ್ಲ ಎಂಬುದು ಪೀಠ ಸ್ಪಷ್ಟಪಡಿಸಿದೆ.



ನವದೆಹಲಿಯಲ್ಲಿ ನಡೆದ ಗೌರವ ವಂದನೆ ಸ್ವೀಕಾರ ಸಮಾರಂಭದಲ್ಲಿ ವೈಸ್ ಅಡ್ಮಿರಲ್ ಅಜಯ್ ಕೊಚ್ಚರ್ ಅವರಿಗೆ ನಿರ್ಗಮಿತ ವೈಸ್ ಅಡ್ಮಿರಲ್ ಸಂಜಯ್ ವಾತ್ಸಾಯನ್ ಅವರು ಶುಭಕೋರಿದರು —ಪಿಟಿಐ ಚಿತ್ರ

## ನೌಕಾಪಡೆ: ಅಜಯ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಆಪರೇಷನ್ ಸಿಂಧೂರ ಸಮಯದಲ್ಲಿ ಹೆಚ್ಚಿನ ವೇಗದ ನೌಕಾ ಕಾರ್ಯಾಚರಣೆಯ ನಿರ್ವಹಣೆ ಮಾಡಿದ್ದ ವೈಸ್ ಅಡ್ಮಿರಲ್ ಅಜಯ್ ಕೊಚ್ಚರ್ ಅವರು ಭಾರತೀಯ ನೌಕಾಪಡೆಯ 48ನೇ ಉಪ ಮುಖ್ಯಸ್ಥರಾಗಿ ಶುಕ್ರವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಕೊಚ್ಚರ್ ಅವರು ಈ ಹಿಂದೆ ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್‌ನ ಪ್ರಧಾನ ಕಮಾಂಡರ್ ಆಗಿ ಕಾರ್ಯ ನಿರ್ವಹಿಸಿದ್ದರು. ಅದಕ್ಕೂ ಮುನ್ನ ಪಶ್ಚಿಮ ನೌಕಾಪಡೆಯ ಕಮಾಂಡ್‌ನ ಮುಖ್ಯಸ್ಥರಾಗಿದ್ದ ಅವರು, ಆಪರೇಷನ್ ಸಿಂಧೂರದ ಸಮಯದಲ್ಲಿ ಪ್ರಮುಖ ಯುದ್ಧೋಪಕರಣಗಳನ್ನು ನೌಕಾಪಡೆ ಆಕ್ರಮಣಕಾರಿಯಾಗಿ ನಿಯೋಜಿಸುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಹಿರಿಯ ವಿದ್ಯಾರ್ಥಿಯಾಗಿರುವ ಕೊಚ್ಚರ್ 1988ರ ಜುಲೈ 1ರಂದು ನೌಕಾಪಡೆಗೆ ನಿಯೋಜನೆಗೊಂಡಿದ್ದರು.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ

# ‘ನೈರುತ್ಯ ಮುಂಗಾರು: ಕಡಿಮೆ ಮಳೆ’

ನವದೆಹಲಿ (ಪಿಟಿಐ): ‘ಈಶಾನ್ಯ ಭಾಗವನ್ನು ಹೊರತುಪಡಿಸಿ, ದೇಶದ ಇತರೆಡೆ ಈ ಬಾರಿ ನೈರುತ್ಯ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಹೇಳಿದೆ.

50 ವರ್ಷಗಳ ದೀರ್ಘಾವಧಿ ಸರಾಸರಿ (1971ರಿಂದ 2020ರ ವರೆಗಿನ ದತ್ತಾಂಶ) ಲೆಕ್ಕಾಚಾರದಲ್ಲಿ ದೇಶದಲ್ಲಿ ಜೂನ್‌ನಿಂದ ಸೆಪ್ಟೆಂಬರ್ ವರೆಗೆ 87 ಸೆಂ.ಮೀನಷ್ಟು ಮಳೆಯಾಗುತ್ತದೆ. ಈ ಬಾರಿ ಈ ಪ್ರಮಾಣದ ಶೇ 90ರಷ್ಟು ಮಾತ್ರವೇ ಮಳೆಯಾಗಲಿದೆ ಎಂದು ಇಲಾಖೆ ಅಂದಾಜಿಸಿದೆ. ಶೇ 94ರಷ್ಟು ಮಳೆಯಾದರೆ, ಅದು ವಾಡಿಕೆ ಮಳೆ. ವಾಡಿಕೆಗಿಂತ ಶೇ 4ರಷ್ಟು ಮಳೆ ಪ್ರಮಾಣದಲ್ಲಿ ಏರುಪೇರಾಗಬಹುದು. ಒಂದು ವೇಳೆ ವಾಡಿಕೆ ಮಳೆ ಪ್ರಮಾಣದ ಶೇ 90ರಷ್ಟು ಮಳೆ ಯಾದರೆ ಮಳೆ ಕೊರತೆ ಉಂಟಾಗಲಿದೆ’ ಎಂದು ಇಲಾಖೆ ತಿಳಿಸಿದೆ.

**ಮುಂದಿನ ಏಳು ದಿನಗಳಲ್ಲಿ ಕೇರಳಂಗೆ ನೈರುತ್ಯ ಮುಂಗಾರ ಪ್ರವೇಶಿಸಬಹುದು ಎಂದು ಅಂದಾಜಿಸಲಾಗಿದೆ**

**ಮೃತ್ಯುಂಜಯ ಮಹೋಪಾತ್ರ,**
ಭಾರತೀಯ ಹವಾಮಾನ ಇಲಾಖೆಯ ಮಹಾನಿರ್ದೇಶಕ

### ಜೂನ್: ತಾಪಮಾನ ಏರಿಕೆ

‘ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಬಿಹಾರ, ಒಡಿಶಾ, ಛತ್ತೀಸಗಢ, ಗುಜರಾತ್, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಜೂನ್‌ನಲ್ಲಿ ಸಾಮಾನ್ಯವಾಗಿ ದಾಖಲಾಗುವ ತಾಪ ಮಾನಕ್ಕಿಂತ ಅಧಿಕ ತಾಪಮಾನ ದಾಖಲಾಗಲಿದೆ. ರಾಜಸ್ಥಾನ ಮತ್ತು ಜಾರ್ಖಂಡ್‌ನಲ್ಲಿ ವಾಡಿಕೆ ಗಿಂತ ಕಡಿಮೆ ತಾಪಮಾನ ದಾಖಲಾಗಲಿದೆ’ ಎಂದು ಐಎಂಡಿ ತಿಳಿಸಿದೆ.

### ‘ಅಗತ್ಯವಾದ ಸಿದ್ಧತೆ ನಡೆಸುತ್ತಿದ್ದೇವೆ’

ಬೇಡಿಕೆಗೆ ತಕ್ಕಂತೆ ನಮ್ಮ ಬಳಿ ಸಾಕಷ್ಟು ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನು ಇದೆ. ಎಲ್ ನಿನೊ ಪರಿಣಾಮಗಳನ್ನು ಎದುರಿಸಲು ಸಿದ್ಧತೆ ನಡೆಸುತ್ತಿದ್ದೇವೆ. ರಾಜ್ಯ ಸರ್ಕಾರಗಳೂ ಎಲ್ಲ ಸಿದ್ಧತೆ ಮಾಡಿಕೊಳ್ಳಬೇಕು

**ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಕೃಷಿ ಸಚಿವ
(ರಾಷ್ಟ್ರೀಯ ಕೃಷಿ ಸಮಾವೇಶದಲ್ಲಿ ಪತ್ರಕರ್ತರ ಪ್ರಶ್ನೆಗೆ ನೀಡಿದ ಉತ್ತರ)

**ಬಿತ್ತನೆ ಬೀಜ ದಾಸ್ತಾನು**

| | | |
|---|---|---|
| **173** ಲಕ್ಷ ಕ್ವಿಂಟಾಲ್ ಬೇಡಿಕೆ | **192** ಲಕ್ಷ ಕ್ವಿಂಟಾಲ್ ದಾಸ್ತಾನು | **1.74** ಲಕ್ಷ ಕ್ವಿಂಟಾಲ್ ರಾಷ್ಟ್ರೀಯ ಬಿತ್ತನೆ ಬೀಜ ನಿಗಮದ ಬಳಿ ಇರುವ ಮೀಸಲು ದಾಸ್ತಾನು |

**ರಸಗೊಬ್ಬರ ದಾಸ್ತಾನು**

| | | |
|---|---|---|
| **390** ಲಕ್ಷ ಟನ್ ಬೇಡಿಕೆ | **200** ಲಕ್ಷ ಟನ್ ದಾಸ್ತಾನು | (ಕೃಷಿ ಸಚಿವರು ನೀಡಿದ ಮಾಹಿತಿ) |

### ‘ಕೃಷಿ, ಆರ್ಥಿಕತೆಗೆ ಹೊಡೆತ’

‘ಎಲ್ ನಿನೊ ತೀವ್ರಗೊಳ್ಳುವ ಕಾರಣದಿಂದಾಗಿಯೇ ದೇಶದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ. ಸೆಪ್ಟೆಂಬರ್ ಹೊತ್ತಿಗೆ ಎಲ್ ನಿನೊ ತೀವ್ರ ಸ್ವರೂಪ ಪಡೆದುಕೊಳ್ಳಲಿದೆ. ಇದರಿಂದ ಮಳೆಯಾಧಾರಿತ ಕೃಷಿಗೂ ಹೊಡೆತ ಬೀಳಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ದೇಶದ ಶೇ 52ರಷ್ಟು ಪ್ರದೇಶಗಳಲ್ಲಿ ಮಳೆಯಾಧಾರಿತ ಕೃಷಿ ಚಟುವಟಿಕೆಗಳು ನಡೆಯುತ್ತವೆ. ‘ಆಹಾರ ಉತ್ಪಾದನೆ, ಜಲವಿದ್ಯುತ್ ಉತ್ಪಾದನೆ ಕಡಿತಗೊಳ್ಳಲಿದೆ. ಇದರಿಂದ ಗ್ರಾಮೀಣ ಭಾಗದ ಜನರ ಆದಾಯ ಕಡಿಮೆಯಾಗಲಿದೆ’ ಎಂದು ಹವಾಮಾನ ತಜ್ಞರು ವಿಶ್ಲೇಷಿಸಿದ್ದಾರೆ.

‘ಕಡಿಮೆ ಮಳೆ ಕಾರಣದಿಂದ ಕೃಷಿ ಚಟುವಟಿಕೆಗಳು ತಡವಾಗಿ ಆರಂಭವಾಗಬಹುದು. ಹೀಗಾದರೆ, ದೇಶದ ವಾಯುವ್ಯ ಭಾಗದಲ್ಲಿ ಬಿಸಿಗಾಳಿ ಕಾಣಿಸಿಕೊಳ್ಳಬಹುದು’ ಎಂದು ಐಐಟಿ ಕಾನ್ಪುರದ ಪ್ರೊಫೆಸರ್ ರಘು ಅವರು ಹೇಳಿದರು.

‘ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಕಾರಣದಿಂದ ಇಂಧನ ದರಗಳು ಏರಿಕೆಯಾಗಿವೆ. ಜೊತೆಗೆ, ರಸಗೊಬ್ಬರ ಕೊರತೆಯು ಈಗಾಗಲೇ ತಲೆದೋರಿದೆ. ಇದರಿಂದ ಕೃಷಿ ಚಟುವಟಿಕೆಗಳನ್ನು ನಡೆಸಲು ರೈತರಿಗೆ ಹೆಚ್ಚು ಹಣ ವ್ಯಯಿಸಬೇಕಾಗುವ ಸಂದರ್ಭವು ಎದುರಾಗಲಿದೆ. ಈಗಾದರೆ, ದೇಶದಲ್ಲಿ ಹಣದುಬ್ಬರ ಏರಲಿದೆ. ಅಂತಿಮವಾಗಿ ಇದು ದೇಶದ ಆರ್ಥಿಕತೆಗೆ ಹೊಡೆತ ನೀಡಲಿದೆ’ ಎಂದು ತಜ್ಞರು ಹೇಳುತ್ತಿದ್ದಾರೆ.

# ಕೇಂದ್ರದಿಂದಲೂ ಕಲ್ಯಾಣ ಯೋಜನೆ

## 2030ರ ಅಂತ್ಯದ ವೇಳೆಗೆ ಗಿಗ್ ಕಾರ್ಮಿಕರ ಸಂಖ್ಯೆ 2.5 ಕೋಟಿ?

ನವದೆಹಲಿ (ಪಿಟಿಐ): 2030ರ ವೇಳೆಗೆ ದೇಶದಲ್ಲಿ ಗಿಗ್ ಕಾರ್ಮಿಕರ ಸಂಖ್ಯೆಯು 2.5 ಕೋಟಿಗೆ ತಲುಪುವ ಸಾಧ್ಯತೆ ಇದ್ದು, ಅವರಿಗೆ ಸೂಕ್ತವಾದ ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಲು ನಿಧಿ ನಿರ್ವಾಹಕರ ಜೊತೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈಗ ದೇಶದಲ್ಲಿ ಅಂದಾಜು 1 ಕೋಟಿ ಗಿಗ್ ಕಾರ್ಮಿಕರಿದ್ದಾರೆ. ಕೇಂದ್ರ ಸರ್ಕಾರವು ಈಗ ಗಿಗ್ ಕಾರ್ಮಿಕರ ಕುರಿತ ದತ್ತಾಂಶ ಸಂಗ್ರಹಿಸುತ್ತಿದೆ. ಗಿಗ್ ಕಾರ್ಮಿಕರನ್ನು ಬಳಕೆ ಮಾಡಿಕೊಳ್ಳುತ್ತಿರುವ ವೇದಿಕೆಗಳು ಅವರ ಕುರಿತಾದ ವಿವರಗಳನ್ನು ಕಾರ್ಮಿಕ ಸಚಿವಾಲಯದ ‘ಇ-ಶ್ರಮ್ ಪೋರ್ಟಲ್’ ಮೂಲಕ ಜೂನ್ 22ಕ್ಕೆ ಮೊದಲು ಸಲ್ಲಿಸಬೇಕಿದೆ ಎಂದು ಸಚಿವಾಲಯದ ಜಂಟಿ ಕಾರ್ಯದರ್ಶಿ ಮತ್ತು ಮಹಾನಿರ್ದೇಶಕ (ಕಾರ್ಮಿಕ ಕಲ್ಯಾಣ) ಅಶುತೋಷ್ ಎ.ಟಿ. ಪೆಡ್ನೇಕರ್ ತಿಳಿಸಿದ್ದಾರೆ.

‘ನಮ್ಮ ಕಾರ್ಮಿಕರ ಪೈಕಿ ಬಹುದೊಡ್ಡ ವರ್ಗವೊಂದು ಗಿಗ್ ವಲಯವನ್ನು ಸೇರುತ್ತಿದೆ. ಆ ವಲಯದ ಸಾಮರ್ಥ್ಯ ಕೂಡ ಅಗಾಧವಾಗಿದೆ... ವಲಯದ ಬಗ್ಗೆ ಸರ್ಕಾರವು ಹೆಚ್ಚು ಗಮನ ನೀಡುತ್ತಿದೆ’ ಎಂದು ಅವರು ಗಿಗ್ ಕಾರ್ಮಿಕರಿಗೆ ಸಂಬಂಧಿಸಿದ ಸಮಾಲೋಚನಾ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.



ಹೊಸ ಕಾರ್ಮಿಕ ಸಂಹಿತೆಗಳಡಿ ಸಾಮಾಜಿಕ ಭದ್ರತಾ ಸಂಹಿತೆಯನ್ನು ಈಗಾಗಲೇ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಇದನ್ನು ಅನುಷ್ಠಾನಕ್ಕೆ ತರುವ ಪ್ರಕ್ರಿಯೆ ನಡೆಯುತ್ತಿದೆ. ಗಿಗ್ ಮತ್ತು ವೆಬ್ ವೇದಿಕೆ ಆಧಾರಿತ ಕಾರ್ಮಿಕರ ಬಗ್ಗೆ ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿಯು ಗಮನ ನೀಡಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

‘ನಾವು ಹಲವು ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದೇವೆ. ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಹಲವು ಮಂದಿ ನಿಧಿ ನಿರ್ವಾಹಕರ ಜೊತೆ ಮಾತುಕತೆ ನಡೆಸುತ್ತಿದ್ದೇವೆ’ ಎಂದು ಅವರು ತಿಳಿಸಿದ್ದಾರೆ.

‘ಯುಪಿಐ ಹಾಗೂ ಆಧಾರ್ ಮೂಲಕ ದೇಶದಲ್ಲಿ ಡಿಜಿಟಲ್ ಪಾವತಿಗಳಲ್ಲಿ ಭಾರಿ ಬದಲಾವಣೆ ಬಂದ ಬಗೆಯಲ್ಲೇ, ಇ-ಶ್ರಮ್ ಪೋರ್ಟಲ್ ಕೂಡ ಕಾರ್ಮಿಕರಿಗೆ ಪ್ರಯೋಜನಗಳನ್ನು ತಲುಪಿಸುವ ಬಗೆಯಲ್ಲಿ ಬದಲಾವಣೆ ತರುವ ಸಾಮರ್ಥ್ಯ ಹೊಂದಿದೆ’ ಎಂದಿದ್ದಾರೆ.

# ಭೂಮಿಗೆ ಹಿಂದಿರುಗಿದ ಚೀನಾ ಗಗನಯಾನಿಗಳು

ಬೀಜಿಂಗ್(ಎಪಿ): ಬಾಹ್ಯಾಕಾಶದಲ್ಲಿ ಏಳು ತಿಂಗಳು ಕಳೆದು, ಗಗನಯಾನಿಗಳ ಮತ್ತೊಂದು ತಂಡಕ್ಕೆ ಕಾರ್ಯಭಾರ ಹಸ್ತಾಂತರಿಸಿರುವ ಚೀನಾದ ಮೂವರು ಗಗನಯಾತ್ರಿಗಳು ಸುರಕ್ಷಿತವಾಗಿ ಭೂಮಿಗೆ ಶುಕ್ರವಾರ ಹಿಂದಿರುಗಿದರು.

ಗಗನಯಾನಿಗಳಾದ ಝೂಾಂಗ್ ಲು, ವು ಫಿ ಹಾಗೂ ಝೂಾಂಗ್ ಹಾಂಗ್‌ಝೂಾಂಗ್ ಅವರನ್ನು ಹೊತ್ತ ಗಗನನೌಕೆ 'ಶೆಂಝೌ-21', ಚೀನಾದ ಮಂಗೋಲಿಯಾ ಪ್ರದೇಶದಲ್ಲಿನ ನಿಗದಿತ ಸ್ಥಳದಲ್ಲಿ ಸುರಕ್ಷಿತವಾಗಿ ಇಳಿಯಿತು.

ಚೀನಾ, 2030ರ ವೇಳೆಗೆ ತನ್ನ ಗಗನಯಾನಿಗಳನ್ನು ಚಂದ್ರನ ಅಂಗಳದಲ್ಲಿ ಇಳಿಸಲು ಸಿದ್ಧತೆ ನಡೆಸಿದೆ.

ಗಗನಯಾನಿಗಳಾದ ಝು ಯಾಂಗ್‌ಝು, ಝೂಾಂಗ್ ಜಿಯುಯಾನ್ ಹಾಗೂ ಲೈ ಕಯಿಂಗ್ ಅವರು 'ಶೆಂಝೌ-23' ಗಗನನೌಕೆ ಮೂಲಕ ಚೀನಾದ 'ತಿಯಾಂಗಾಂಗ್ ಬಾಹ್ಯಾಕಾಶ ನಿಲ್ದಾಣ'ಕ್ಕೆ ತೆರಳಿದ್ದಾರೆ. ಇವರು ಮುಂದಿನ ಒಂದು ವರ್ಷ ಸಂಶೋಧನೆ, ಪ್ರಯೋಗಗಳನ್ನು ನಡೆಸಲಿದ್ದಾರೆ ಎಂದು ಷಿನ್‌ಹುವಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಚೀನಿ ಭಾಷೆಯಲ್ಲಿ ತಿಯಾಂಗಾಂಗ್ ಎಂದರೆ 'ಸ್ವರ್ಗದ ಅರಮನೆ' ಎಂದರ್ಥ.

# ಲೈಂಗಿಕ ದೌರ್ಜನ್ಯ: ಇಸ್ರೇಲ್ ರಷ್ಯಾ ಪಡೆ ಕಪ್ಪುಪಟ್ಟಿಗೆ ಸೇರ್ಪಡೆ

ವಿಶ್ವಸಂಸ್ಥೆ (ಎಪಿ): ಯುದ್ಧದ ಸಂದರ್ಭದಲ್ಲಿನ ಲೈಂಗಿಕ ದೌರ್ಜನ್ಯಗಳ ಕುರಿತು ದಾಖಲಿಸುವ ವಿಶ್ವಸಂಸ್ಥೆಯ ವಾರ್ಷಿಕ ವರದಿಯು, ಇಸ್ರೇಲ್ ಮತ್ತು ರಷ್ಯಾ ಸೇನಾ ಪಡೆಯನ್ನು ಕಪ್ಪುಪಟ್ಟಿಗೆ ಸೇರಿಸಿದೆ.

35 ಪುಟಗಳ ವರದಿಯು ವಿಶ್ವಸಂಸ್ಥೆಗೆ ಗುರುವಾರ ಸಲ್ಲಿಕೆಯಾಗಿದೆ. ವಿಶ್ವದಾದ್ಯಂತ ನಡೆದ ಸಂಘರ್ಷಗಳ ವೇಳೆ ಲೈಂಗಿಕ ದೌರ್ಜನ್ಯ ಎಸಗಿದ ಕಾರಣಕ್ಕೆ 12 ದೇಶಗಳಲ್ಲಿನ 77 ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ.

'2024ಕ್ಕಿಂತ 2025ರಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ' ಎಂದು ವರದಿ ತಿಳಿಸಿದೆ.

ಪ್ಯಾಲೆಸ್ಟೀನ್‌ನ ಬಂಧಿತರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪವನ್ನು ಇಸ್ರೇಲ್ ಮೇಲೆ ಹೊರಿಸಲಾಗಿದೆ.

ಉಕ್ರೇನ್ ಜೊತೆಗಿನ ಯುದ್ಧದ ಸಂದರ್ಭದಲ್ಲಿನ ಯುದ್ಧ ಕೈದಿಗಳು ಮತ್ತು ಬಂಧಿತರಾದ ನಾಗರಿಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಕಾರಣಕ್ಕೆ ರಷ್ಯಾದ ಭದ್ರತಾ ಪಡೆಗಳನ್ನು ಮೊದಲ ಬಾರಿಗೆ ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಈ ಪಟ್ಟಿಯಲ್ಲಿ ಹಮಾಸ್ ಬಂಡುಕೋರರು ಸೇರಿದ್ದಾರೆ.

ಕಳೆದ ವರ್ಷದ ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಗುಟೆರಸ್ ಅವರು ನೀಡಿದ್ದ ವರದಿಯಲ್ಲಿ ಇಸ್ರೇಲ್ ಮತ್ತು ರಷ್ಯಾವನ್ನು ಕಪ್ಪು ಪಟ್ಟಿಗೆ ಸೇರಿಸಬಹುದು ಎಂದು ಎಚ್ಚರಿಸಿದ್ದರೂ. ಎರಡು ದೇಶಗಳ ರಾಯಭಾರಿಯಗಳು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ಗುಟೆರಸ್ ವಿರುದ್ಧ ವಾಗ್ದಾಳಿ ನಡೆಸಿದ್ದರು.

'ಸಂಘರ್ಷಕ್ಕೆ ಸಂಬಂಧಿಸಿ ಹಲವು ಲೈಂಗಿಕ ದೌರ್ಜನ್ಯ ಘಟನೆಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಗಾಜಾ ಮತ್ತು ವೆಸ್ಟ್‌ಬ್ಯಾಂಕ್‌ನಲ್ಲಿ 14 ಪುರುಷರು, ಏಳು ಮಹಿಳೆಯರು, 9 ಹುಡುಗರು ಮತ್ತು ಒಂದು ಹುಡುಗಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ. ಇಂಥ ಘಟನೆಗಳು 2025ರಲ್ಲಿ 13, 2023 ಮತ್ತು 2024ರಲ್ಲಿ 18 ನಡೆದಿವೆ' ಎಂದು ವರದಿ ತಿಳಿಸಿದೆ.

## ಸಂಪರ್ಕ ಕಡಿತ: ಇಸ್ರೇಲ್ ಘೋಷಣೆ

ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರಸ್ ಅವರ ಜೊತೆ ಎಲ್ಲ ಸಂಪರ್ಕಗಳನ್ನು ಕಡಿತಗೊಳಿಸುವುದಾಗಿ ಇಸ್ರೇಲ್ ರಾಯಭಾರಿ ಘೋಷಿಸಿದ್ದಾರೆ.

ಲೈಂಗಿಕ ದೌರ್ಜನ್ಯ ವಿಚಾರವಾಗಿ ಕಪ್ಪುಪಟ್ಟಿಗೆ ಸೇರಿಸಿರುವುದಲ್ಲಿ ಅಸಮಾಧಾನ ವ್ಯಕ್ತಪಡಿಸಿದ ಅವರು, 'ಗುಟೆರಸ್ ಮುಖ್ಯಸ್ಥರಾಗಿರುವವರೆಗೆ ಮಹಾಪ್ರಧಾನ ಕಾರ್ಯದರ್ಶಿ ಕಚೇರಿ ಜೊತೆ ಇಸ್ರೇಲ್‌ಗೆ ಯಾವುದೇ ಸಂಪರ್ಕವಿರುವುದಿಲ್ಲ' ಎಂದು ಹೇಳಿದ್ದಾರೆ.

'ಈ ಆರೋಪಗಳನ್ನು ನಿಸ್ಸಂದಿಗ್ಧವಾಗಿ ನಿರಾಕರಿಸುತ್ತೇವೆ. ಈ ನಿರ್ಧಾರವು ಇಸ್ರೇಲ್ ವಿರುದ್ಧ ವಿಶ್ವಸಂಸ್ಥೆ ದೀರ್ಘಕಾಲದ ಸಾಂಸ್ಥಿಕ ದ್ವೇಷಕ್ಕೆ ಉದಾಹರಣೆ' ಎಂದು ಇಸ್ರೇಲ್ ವಿದೇಶಾಂಗ ಸಚಿವಾಲಯ ಹೇಳಿದೆ.

-----------------------------------------------ಶುಭವಂದನೆಗಳು-----------------------------------------------

Dr. Rajkumar IAS